

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 | Issue : 20 | Wednesday 24-09-2025 | E-mail : maruti.b.hosamani76@gmail.com | Page: 4 | Price : Rs. 1/-


## ಕಲ್ಮಠವು ಪಟ್ಟಣದಲ್ಲಿ ಕಳೆದ 50 ವರ್ಷಗಳಿಂದ ದಸರಾ ಹಬ್ಬವನ್ನು ಆಚರಿಸಿ ಕೊಂಡು ಬರುತ್ತಿದೆ – ಹಂಪಯ್ಯ.ನಾಯಕ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಹಂಪಯ್ಯ.ನಾಯಕ ಉದ್ಘಾಟಿಸಿ ಮಾತನಾಡಿ ನಾಡಿನ ಮಠಗಳು ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡುತ್ತಿವೆ. ಕಲ್ಮಠವು ಪಟ್ಟಣದಲ್ಲಿ ಕಳೆದ 50 ವರ್ಷಗಳಿಂದ ದಸರಾ ಹಬ್ಬವನ್ನುಹಾಗೂ ದೇವಿಯ ಆರಾಧನೆಯನ್ನು ಮಾಡುತ್ತಾ ಬಂದಿದೆ. ಕಲ್ಮಠದಲ್ಲಿ ಭಕ್ತರು ದೇವಿಯ ಸ್ವರೂಪವನ್ನು ಕಾಣುತ್ತಿದ್ದಾರೆ. ಶ್ರೀಮಠವುಧಾರ್ಮಿಕಕಾರ್ಯಕ್ರಮಗಳಜೊತೆಗೆ ತಾಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಹಾಗೂ ಜನರಲ್ಲಿ ವೈಚಾರಿಕ ಭಾವನೆಯನ್ನು ಮೂಡಿಸುತ್ತಿದೆ. ಲಿಂ.ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮಿಗಳು ಗಾರಿಗೆ ಜಾತ್ರೆಗೆ ಹಾಗೂ ಶ್ರೀದೇವಿಯ ರಜತ ಅಂಬಾರಿ ಮಹೋತ್ಸವವನ್ನು ಪ್ರಾರಂಭಿಸುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸಿದರು ದಸರಾ ಮಹೋತ್ಸವ 50 ನೇ. ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸಿ ಕೊಳ್ಳುತ್ತಿದೆ. ಪಟ್ಟಣಕ್ಕೆ ಆಗಮಿಸುವ ಪಂಚ ಪೀಠಗಳ ಜಗದ್ಗುರುಗಳನ್ನು ಭಕ್ತಿ ಶ್ರದ್ದೆಗಳಿಂದ ವೈಭವದಿಂದ ಸ್ವಾಗತಿಸೋಣ ಹಾಗೂ ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸೋಣ ಎಂದು ತಿಳಿಸಿದರು.

**ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಹಂಪಯ್ಯನಾಯಕ ಉದ್ಘಾಟಿಸಿದರು.**

---

**ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಜನಪದ ಗಾಯಕಿ ಕರಡಿಗುಡ್ಡ ಗ್ರಾಮದ ದುರ್ಗಮ್ಮ ರವರಿಗೆ ಶ್ರೀಕಲ್ಮಠ ದಿಂದ ಸುವರ್ಣ ಸಾಧಕಿ ಸೀರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.**

ಹರಿದಾಸ ಸಾಹಿತ್ಯದ ಕುರಿತು ನಿವೃತ್ತ ಪ್ರಾಧ್ಯಾಪಕರಾದ ಶೀಲಾದಾಸ್ ವಿಶೇಷ ಉಪನ್ಯಾಸ ನೀಡಿ ನಮ್ಮ ರಾಯಚೂರು ಜಿಲ್ಲೆಯು ಹರಿದಾಸರ, ಶರಣರ, ಸೂಫಿ ಸಂತರ ತವರುರಾಗಿದೆಮಾನ್ವಿತಾಲೂಕಿನಚೀಕಲಪರ್ವಿ ಗ್ರಾಮದಲ್ಲಿ ತುಂಗಭದ್ರ ನದಿಯುವ ಉತ್ತರಾಭಿ ಮುಖವಾಗಿ ಹರಿಯುವ ಪುಣ್ಯ ನದಿಯ ಮಡಿಲಲ್ಲಿ ಜನಿಸಿದ ವಿಜಯದಾಸರು ದುಗ–'ಿಯ ಕುರಿತು ರಚಿಸಿದ ಸೂಳಾದಿ ಹಾಗೂ ಚಿದನಂದ ವಾದೂತರು ರಚಿಸಿದ ಶ್ರೀದೇವಿಯ ವರ್ಣನೆ ಮಹಿಮೆಗಳನ್ನು ಕಾಣಬಹುದು. ಸೂಳಾದಿಗಳು ಹಾಗೂ ಚನ್ನ ಬಸವೇಶ್ವರರು ರಚಿಸಿದ ವಚನಗಳು ಒಂದೇ ಭಾವನೆಯನ್ನು ಹೊಂದಿವೇ ಮಾನ್ವಿಯ ಜಗನ್ನಾಥದಾಸರು ರಚಿಸಿದ ಹರಿಕಾಥಮೃತ ಸಾರವು ಜ್ಞಾನದ ಆಗರವಾಗಿದೆ ನಮ್ಮ ಕಷ್ಟಗಳಿಗೆ ಪರಿಹಾರವನ್ನು ನೀಡುವವರು ಗುರುವಾಗಿದ್ದಾರೆ. ಪ್ರಾಚೀನ ಕಾಲದಿಂದಲು ನಾಡಿನ ಮಠಗಳು ಜ್ಞಾನ ಯಜ್ಞವನ್ನು ಮಾಡುತ್ತ ಶಿಕ್ಷಣ ಕೇಂದ್ರಗಳಂತೆ ಕಾರ್ಯ ನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜನಪದ ಗಾಯನದಲ್ಲಿ ಸಾಧನೆ ಮಾಡಿದ ಕರಡಿ ಗುಡ್ಡ ಗ್ರಾಮದ ದುರ್ಗಮ್ಮ ರವರಿಗೆ ಶ್ರೀಕಲ್ಮಠದಿಂದ ಸುವರ್ಣ ಸಾಧಕಿ ಸೀರಿ ಪ್ರಶಸ್ತಿಯನ್ನು ನೀಡಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯರು ಸನ್ಮಾನಿಸಿ ಗೌರವಿಸಿದರು.

ಶ್ರೀದೇವಿ ಪುರಾಣ ಪ್ರವಚನವನ್ನು ಗುಡೂರು ಇಲಕಲ್ ಹಿರೇಮಠದ ಶ್ರೀ ಅನ್ನದಾನಸ್ವಾಮಿಗಳು ನೀಡಿದರು. ಸಂಗೀತೆ ಸೇವೆಯನ್ನು ವಿಶ್ವೇಶ್ವರಯ್ಯ ಹಿರೇಮಠ, ತಬಲ ಸಾಥ್ ಸಿದ್ದಯ್ಯಸ್ವಾಮಿ ನೀಡಿದರು. ಬೃಹನ್ಮಠ ನೀಲಗಲ್ ಸಂಸ್ಥಾನ ಮಠದ ಶ್ರೀ ರೇಣುಕ ಶಾಂತಮಲ್ಲಶಿವಾಚಾರ್ಯಮಹಾಸ್ವಾಮಿಗಳು, ಚೀಕಲಪರ್ವಿ ಶ್ರೀರುದ್ರ ಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು, ಮಾಜಿ ಶಾಸಕ ರಾಜಾವೆಂಕಟಪ್ಪ ನಾಯಕ, ಬಸವನಗೌಡ ಬ್ಯಾಗವಾಟ, ಗಂಗಾಧರ ನಾಯಕ, ಸೇರಿದಂತೆ ಇನ್ನಿತರರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕು0ದಿ.ಮಾನ್ವಿ**

## ಭೀಮಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು–ಜನರಲ್ಲಿ ಪ್ರವಾಹದ ಭೀತಿ



**ಸಿಹಿ ಕಹಿ ಸುದ್ದಿ,**

**ಆಲಮೇಲ :** ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಮಳೆ ಇರುವದರಿಂದ ವಿಜಯಪುರ ಜಿಲ್ಲೆಯ ಇಂಡಿ ಆಲಮೇಲ ತಾಲೂಕಿನಲ್ಲಿ ಹರಿಯುವ ಭೀಮಾ ನದಿಯ ದಂಡಿಯಲ್ಲಿರುವ ಜನರಲ್ಲಿ ಪ್ರವಾಹದ ಭೀತಿನಲ್ಲಿ ಜನರು ಕಾಲ ಕಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಹಾರಾಷ್ಟ್ರದೊಂದಿಗೆ ಮಾತನಾಡಿದ್ದೆ, ಪ್ರಸ್ತುತ ಸಿನಾ ಅಣೆಕಟ್ಟಿನಿಂದ ಸುಮಾರು 1.50 ಲಕ್ಷ ಕ್ಯೂಸೆಕ್ ನೀರು ಮತ್ತು ಉಜಿನಿ ಅಣೆಕಟ್ಟಿನಿಂದ 53000 ಕ್ಯೂಸೆಕ್ ನೀರು ಬಿಡುಗಡೆಯಾಗುತ್ತಿದೆ, ಒಟ್ಟಾರೆಯಾಗಿ ನಮಗೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಜಲಾನಯನ ಪ್ರದೇಶದಿಂದ ಸುಮಾರು 2.05 ಲಕ್ಷ ನೀರು ಸಿಗುತ್ತಿದೆ, ಆದ್ದ–ರಿಂದ ದಯವಿಟ್ಟು ಭೀಮಾ ನದಿಯ ಮೂಲಕ ಸುಮಾರು 2.50 ಲಕ್ಷ ಕ್ಯೂಸೆಕ್ ನೀರು ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಪರಿಗಣಿಸಿ, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

ಮನೋಜ್ ಕುಮಾರ್ ಎಸ್.ಇ ತಿಳಿಸಿದರು

ಭೀಮಾನದಿಪ್ರವಾಹಕ್ಕೆಒಳಗಾಗುವಗ್ರಾಮಗಳಿಗೆ ಆಲಮೇಲ ತಾಲೂಕ ತಹಶೀಲ್ದಾರ್ ಧನಪಾಲ ಶೆಟ್ಟಿ ತಾರಾಪೂರ ತಾವರಖೇಡ ಮದನಹಳ್ಳಿ ಬ್ಯಾಡಿಗಿ ಹಾಳ ದೇವಣಗಾಂವ ಕಡ್ಲೆವಾಡ ಶಂಬೇವಾಡ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರಿಗೆ ನದಿಯ ದಂಡಿಗೆ ಮಹಿಳೆಯರು ಮಕ್ಕಳು ದನಕರುಗಳನ್ನು ಮೇಯಿಸಲು ನದಿಯ ದಂಡಿಗೆ ಹೋಗಬಾರದೆಂದು ಎಂದು ತಿಳಿಸಿದರು ಹಾಗೂ ರೈತರು ನದಿಯ ದಂಡೆಯಲ್ಲಿರುವ ಪಂಪ್ ಸೆಟ್ ಗಳು ತೆಗೆಯಬೇಕೆಂದು ತಿಳಿಸಿದರು ಹಾಗೂ ಹಳೆತಾರಾಪುರ ಗ್ರಾಮದಲ್ಲಿ ಇನ್ನೂ 15 ರಿಂದ 20 ಕುಟುಂಬಸ್ಥರು ಇದ್ದು ಅವರನ್ನು ಕೂಡಲೆ ಪುನರ್ವಸತಿಗೆ ಹೋಗಬೇಕೆಂದು ತಿಳಿಸಿದರು ಗ್ರಾಮ ಲೆಕ್ಕಾಧಿಕಾರಿಯಾದ ಯಮನೂರ ಗೋಂದಳ್ಳಿ ಮಲ್ಲಿಕಾರ್ಜುನ ಬಿರಾದಾರ ಮುದಿಗೌಡ ಬಿರಾದಾರ ಶಂಕರಗೌಡ ಪಾಟೀಲ ಸಮರ್ಥ ಜೋಗುರ ಚಂದ್ರಕಾಂತ್ ಬಿರಾದಾರ ಇದ್ದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ರೇವನಸಿದ್ದಯ್ಯ.ಜಿ.ಹಿರೇಮಠ**
**ಆಲಮೇಲ**

## ವಿಶ್ವದ ಪ್ರಥಮ ವಾಸ್ತು ಶಿಲ್ಪಿ ವಿಶ್ವಕರ್ಮರು

**ರಬಕವಿ–ಬನಹಟ್ಟಿ :** ವಿಶ್ವಕರ್ಮರನ್ನು ದೇವರುಗಳ ವಾಸ್ತು ಶಿಲ್ಪಿ ಎಂದು ಪರಿಗಣಿಸಲಾಗುತ್ತಿದೆ. ವಿಶ್ವಕರ್ಮರು ಪ್ರಪಂಚವನ್ನು, ಎಲ್ಲ ದೇವತೆಗಳನ್ನು ಮತ್ತು ಜೀವಿಗಳನ್ನು ಸೃಷ್ಟಿಸಿರುವುದರಿಂದ ಅವರು ವಿಶ್ವದ ಸೃಷ್ಟಿಕರ್ತರಾಗಿದ್ದಾರೆ ಎಂದು ತಹಶೀಲ್ದಾರ ಗಿರೀಶ ಸ್ವಾದಿ ಹೇಳಿದರು.

ಅವರು ಬುಧವಾರ ರಬಕವಿ–ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ವಿಶ್ವಕರ್ಮ ಮಹೋತ್ಸವದ ನಿಮಿತ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ವಿಶ್ವಕರ್ಮ ಸಮಾಜ ಬಾಂಧವರು ಕುಶಲ ಕರ್ಮಿಗಳಾಗಿದ್ದಾರೆ. ಅವರು ಶ್ರಮ ಜೀವಿಗಳಾಗಿದ್ದಾರೆ.

ಅವರಿಂದಾಗಿ ಇಂದು ಅದ್ಭುತವಾದ ಕಲಾಕೃತಿಗಳನ್ನು ನಾವು ಕಾಣುತ್ತಿದ್ದೇವೆ. ವಿಶ್ವಕರ್ಮ ಸಮಾಜ ಬಾಂಧವರು ತಮ್ಮ ವೃತ್ತಿಯ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ದಿಶೆಯಲ್ಲಿ ಗಮನ ನೀಡಬೇಕು. ವಿಶ್ವಕರ್ಮರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು




ತಹಶೀಲ್ದಾರ ಸ್ವಾದಿ ತಿಳಿಸಿದರು.

ಈ ಸಂದರ್ಭದಲ್ಲಿ ಶಿರಸ್ತೆದಾರರಾದ ರಾಜಶೇಖರ ಸಾತಿಹಾಳ, ಶಾಂತಾ ಕೂಗಾಟೆ, ಕಂದಾಯ ನಿರೀಕ್ಷಕರಾದ ಪಿ. ಆರ್. ಮಠಪತಿ, ಸದಾಶಿವ ಕುಂಬಾರ, ಚೇತನ ಭಜಂತ್ರಿ, ರವಿ ಹುಲ್ಲೆನ್ನವರ, ಬಿ. ಎಂ. ಹಳೇಮನಿ ಸಮಾಜದ ಅಧ್ಯಕ್ಷರಾದ ಮೌನೇಶ ಬಡಿಗೇರ, ಹಣಮಂತ ಪತ್ತಾರ, ಪ್ರಮುಖರಾದ ಅಶೋಕ ಪತ್ತಾರ, ಮೋಹನ ಪತ್ತಾರ, ಅರವಿಂದ ಪತ್ತಾರ, ಚಿದಾನಂದ ಪತ್ತಾರ, ರಮೇಶ ಬಡಿಗೇರ, ರಾಜು ಬಡಿಗೇರ, ಕುಮಾರ ಪತ್ತಾರ, ಅನಿಲ ಬಡಿಗೇರ, ಮಲ್ಲಿಕಾರ್ಜುನ ಪತ್ತಾರ, ಶ್ರೀಧರ ಸೋನಾರ, ದೀಪಕ ಆಸಂಗಿ, ರಾಘವೇಂದ್ರ ಸೋನಾರ, ಕಿರಣ ಆಸಂಗಿ, ರವೀಂದ್ರ ಪತ್ತಾರ, ಕಾಳಪ್ಪ ಪತ್ತಾರ, ನಾಗಲಿಂಗ ಪತ್ತಾರ, ಅಚ್ಯುತ ಪತ್ತಾರ, ಬಾಳುಬಡಿಗೇರ, ಕಲಾಪತ್ತಾರ, ಲಲಿತಾಪತ್ತಾರ, ಶಕುಂತಲಾ ಪತ್ತಾರ, ತುಂಗಭದ್ರಾ ಪತ್ತಾರ ಸೇ–ರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

### ರಬಕವಿ ಪಿಕೆಪಿಎಸ್ ಸಾಮಾನ್ಯ ಸಭೆ

## ಜನಸೇವೆಯಿಂದ ಸಂಘ–ಸಂಸ್ಥೆಗಳ ವಿಶ್ವಾಸ ವೃದ್ಧಿ

**ರಬಕವಿ :** ಜನರ ಸೇವೆ ಮಾಡುವ ಮೂಲಕ ಜನತೆಯ ವಿಶ್ವಾಸ ಪಡೆದುಕೊಂಡು ಸಂಘ–ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿರುವದು ಸಂತಸವೆನಿಸುತ್ತಿದೆಯೆಂದು ರಬಕವಿ ಪಿಕೆಪಿಎಸ್ ಉಪಾಧ್ಯಕ್ಷ ಸುಭಾಸ ಮಧುರಖಂಡಿ ತಿಳಿಸಿದರು.

ರಬಕವಿಯ ಪಿಕೆಪಿಎಸ್ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಹಕಾರಿ ಸಂಘವು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಸದಸ್ಯ–ರಿಗೆ ಪೂರಕ ಕಾರ್ಯದಲ್ಲಿ ತೊಡಗಿರುವದು ಹೆಮ್ಮೆ ಎನಿಸುತ್ತಿದೆಯೆಂದರು.



ಸಂಘದ ಅಧ್ಯಕ್ಷ ಮಾರುತಿ ನಾಯಕ ಮಾತನಾಡಿ,

ಪ್ರಸಕ್ತ ವರ್ಷ 8.75 ಲಕ್ಷ ರೂ. ಗಳಷ್ಟು ಲಾಭ ಗಳಿಸಿದ್ದು, ಸ್ವಂತ ಕಟ್ಟಡ ಹೊಂದುವ ಬಗ್ಗೆ ಸಹಮತ ತೋರಿರುವ ಸದಸ್ಯರ ಬೆಂಬಲದಿಂದ ಶೀಘ್ರ ಪೂರಕ ವ್ಯವಸ್ಥೆ ಕಲ್ಪಿಸಲಾಗುವುದೆಂದರು. ಸದಸ್ಯರ ಅಪಘಾತ ನಿಧಿಗೆ ವಿಶೇಷ ಆದ್ಯತೆ ಕಲ್ಪಿಸಲಾಗುವದೆಂದು ತಿಳಿಸಿದರು.

ಗಂಗಪ್ಪ ಹುಲಕುಂದ, ಮಲ್ಲಪ್ಪ ಚೌಲಗಿ, ಡಾ. ಕಲ್ಲಪ್ಪ ಕುಚನೂರ, ಮಹಾನಿಂಗ ಪಾಟೀಲ, ವಿವೇಕ ಕೋಪರ್ಡೆ, ಶ್ರೀಕಾಂತ ವಾಘಮೋರೆ, ಅನುಸೂಯಾ ಅರಕೇರಿ, ಅಣ್ಣಪ್ಪ ಮೂಲಿಮನಿ, ಅಂದಾನಿ ಮುತ್ತೂರ, ಹುಚ್ಚಪ್ಪ ಕೊಕ್ಕನವರ, ಶಿವಪ್ಪ ಯಾದವಾಡ, ಪ್ರಕಾಶ ವಜ್ಜರಮಟ್ಟಿ, ಮಹಾದೇವ ಬಾಪೂರಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಮಾನವನ ಆರ್ಥಿಕ ಬದುಕಿಗೆ ಊರುಗೋಲಾಗಿದ್ದು ಸಹಕಾರಿ ಕ್ಷೇತ್ರ

**ನವಲಗುಂದ :** "ಸಹಕಾರಿ ಕ್ಷೇತ್ರ ಆಲದ ಮರದ ರೀತಿ ಬೆಳೆದು ನಿಂತಿದೆ.ರಾಷ್ಟ್ರೀಕೃತ ಬ್ಯಾಂಕಗಳನ್ನು ಮೀರಿ ವ್ಯವಹರಿಸುತ್ತಿವೆ. ಮೊದಲು ಸಹಾಯ ನಂತರ ಕಾಗದ ಪತ್ರ, ಜಾಮೀನು ಎಂಬ ಸಿದ್ಧಾಂತ ಸಹಕಾರಿ ಕ್ಷೇತ್ರದ ಗುಣವಾಗಿದೆ.

ಮನುಷ್ಯನ ವಿಶ್ವಾಸ, ಆತನ ಪರಿಸ್ಥಿತಿಗೆ ಸ್ಪಂದಿಸುವ ಮಾನವೀಯತೆಯ ವಲಯವೇ ಸಹಕಾರಿ ಕ್ಷೇತ್ರದ ಆದ್ಯತೆಯಾಗಿದೆ.

ಶಿಕ್ಷಕರ ಈ ಸಂಸ್ಥೆ ಅದ್ಬುತ ಕೆಲಸ ಮಾಡಿದೆ.

ನವಲಗುಂದ ನರಗುಂದ ತಾಲೂಕಿನ ಶಿಕ್ಷಕರು ಸೇರಿ 5,ರೂ10, ರೂ ದಿಂದ ಪ್ರಾರಂಭ ಮಾಡಿ ಇಂದು 15,00,000 ರೂ ವರೆಗೆ ಸದಸ್ಯರಿಗೆ ಸಾಲ ನೀಡುವ ಸಾಮಥ್ಯ9 ಹೊಂದಿರುವದು ಸಂಘದ ಯಶೋಗಾಥೆಯಾಗಿದೆ.

ಕೋಟಿಗೂ ಮೀರಿದ ವ್ಯವಹಾರ ಮಾಡುತ್ತಿರುವದು ಸಹಕಾರಿ ರಂಗದಲ್ಲಿ ತನ್ನ ಹೆಜ್ಜೆಗುರುತು ಮೂಡಿಸಿದೆ.

ಸುಂದರವಾದ ಸಹಕಾರಿ ಭವನ ನಿಮಾ9ಣ ಮಾಡಿ ಶಿಕ್ಷಕರ ಕುಟುಂಬಕ್ಕೂ, ಸಾವ9ಜನಿಕರ ಸಭೆ. ಸಮಾರಂಭ, ಮಂಗಲಕಾಯ9ಗಳಿಗೆ ನೆರವಾಗಿದೆ. ಇದೊಂದು ಅದ್ಭುತ ಬೆಳವಣಿಗೆ.ನೂರು ವರ್ಷ ಪೊರ?ಸಿ ಶತಮಾನೋತ್ಸವ ಆಚರಿಸುತ್ತಿರುವದು ಸಂತಸದಕ್ಷಣ.ಇದಕ್ಕೆಶ್ರಮಿಸಿದಎಲ್ಲಾಅಧ್ಯಕ್ಷರು, ನಿದೆ9ಶಕರು,ಶಿಕ್ಷಕರು ಅಭಿನಂದನಾಹ9ರು."






ಎಂದು ಶಿರಹಟ್ಟಿ ಜಗದ್ಗುರು ದಿಂಗಾಲೇಶ್ವರ ಶ್ರೀಗಳು ಪ್ರಶಂಸಿದರು. ಪೂಜ್ಯರು ನವಲಗುಂದ ನಗರದ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಪತ್ತಿನ ಸಂಘದ ಶತಮಾನೋತ್ಸವದ ಪಾವನ ಸಾನಿಧ್ಯವಹಿಸಿ ಆಶಿ9ವಚನ ನೀಡಿ ಮಾತನಾಡಿದರು.

ಸುಳ್ಳದ ಪಂಚಗ್ರಹ ಹಿರೇಮಠದ ಪೂಜ್ಯರು ಸಾನಿಧ್ಯ ವಹಿಸಿ "ಸಂಘ ನಡೆದು ಬಂದ ದಾರಿ" ಕಿರು ಹೊತ್ತಿಗೆ ಲೋಕಾಪ9ಣೆ ಮಾಡಿದರು.

ಸಂಘದ ಅಧ್ಯಕ್ಷರಾದ ಗಣಪತಿ ವಸಂತ ಹೊಳೆಯಣ್ಣವರ ಅಧ್ಯಕ್ಷತೆ ವಹಿಸಿ ವಾರ್ಷಿಕ ವರದಿ ಮಂಡಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಭಾವತಿ ಶಂಕರ ಬ ಪಾಟೀಲ ಮುನೇನಕೊಪ್ಪ ಹಾಗೂ ಡಾ॥ ಸಂಜಯ ಹೊಸಮಠ ನಿರ್ದೇಶಕರು ಸಹಕಾರ ಸಂಘಗಳ ಮಹಾಮಂಡಳ ಬೆಂಗಳೂರು ಭಾಗವಹಿಸಿದ್ದರು.

ಶ್ರೀಮತಿ ಎಸ್ ಬಿ ಅಳಗವಾಡಿ ಪ್ರಾಥಿ9ಸಿದರು.

ಶ್ರೀ ಎಸ್ ಎಚ್ ಭಜಂತ್ರಿ ಸ್ವಾಗತಿಸಿದರು

ಶ್ರೀ ಜಿ ವೈ ಪಡಸುನಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶ್ರೀ ಎಸ್ ಎಸ್ ಅಮಾತೆನ್ನವರ ನಿರೂಪಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಬಿ ಕೆ ಹಾಲವರ ವಂದಿಸಿದರು.

ಇದೇ ಸಂಧರ್ಭದಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ, ನಿವೃತ್ತ ಶಿಕ್ಷಕರಿಗೆ, ಸಂಘದ ಹಿರಿಯ ಸದಸ್ಯರಿಗೆ,ಪ್ರಶಸ್ತಿ ವಿಜೇತ ಶಿಕ್ಷಕರಿಗೆ, ನಿದೇ9ಶಕರಿಗೆ,

ಜಿಲ್ಲಾ ಶ್ರೇಷ್ಠ ಕೃಷಿಕ ಪ್ರಶಸ್ತಿ ಪುರಸ್ಕೃತ ರಾದ ಡಾ, ಶೌಕತ್ ಅಲಿ, ಲಂಬೂನವರ ಹಾಗೂ ಮಂಜುನಾಥ್, ಕಾಲವಾಡ ರ?ತರಿಗೆ ಗೌರವಿಸಲಾಯಿತು.

ಕಾಯ9ಕ್ರಮದಲ್ಲಿ ಕುಮಾರಿ ಮಹನ್ಯ ಪಾಟೀಲ ಇವರಿಂದ ಹಾಡು, ಮಿಮಿಕ್ರಿ ಕಲಾವಿದ ಶರಣು, ಯಮನೂರ ಇವರಿಂದ ನಗು ಹಬ್ಬ ಜರುಗಿತು..

ಈ ಸಂದರ್ಭದಲ್ಲಿ ನೌಕರ ಸಂಘದ ಅಧ್ಯಕ್ಷ ವ್ಹಿ ಡಿ ರಂಗಣ್ಣವರ,

ಎಸ್ ಎಫ್ ನೀರಲಗಿ, ವ್ಹಿ ಎಂ ಹಿರೇಮಠ, ಎಂ ಎನ್ ವಗ್ಗರ, ಎಲ್ ಬಿ ಕಮತ, ಬಿ ಎಂ ಯಲಿಗಾರ, ಎನ್ ವೈ ಕಳಸಾಪೂರ, ಎಲ್ ಎಂ ನಾವಳ್ಳಿ ಹಾಗೂ ಇತರರಿದ್ದರು.

# ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಬದ್ಧ



**ಬೆಳಗಾವಿ :** ದಿ.ಅಪ್ಪಣ್ಣಗೌಡ ಪಾಟೀಲರ ಪೆನಲ್ ಬೆಂಬಲಿಸಿ ಆಶೀರ್ವಾದ ಮಾಡಿದರೆ ಮುಂದಿನ ದಿನಗಳಲ್ಲಿ ವಿದ್ಯುತ್ ಸಹಕಾರ ಸಂಘ ಅಭಿವೃದ್ಧಿ ಪಥದತ್ತ ಸಾಗುವುದಲ್ಲದೇ ಗ್ರಾಹಕರಿಗೆ ಉತ್ತಮ ದರ್ಜೆಯ ಸೇವೆ ನೀಡಲಿಕ್ಕೆ ನಾವೆಲ್ಲರೂ ಬದ್ಧರಿದ್ದೇವೆ ಎಂದು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಭರವಸೆ ನೀಡಿದರು.

ಹುಕ್ಕೇರಿ ತಾಲೂಕಿನ ನಿಡಸೋಸಿ ಗ್ರಾಮದಲ್ಲಿ ಈಚೆಗೆ ಜರುಗಿದ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ವಿದ್ಯುತ್ ಸಂಘದ ಚುನಾವಣೆಯಲ್ಲಿ ನಮ್ಮ ಪೆನಲ್ ಬೆಂಬಲಿಸಿದರೆ, ತಮ್ಮ ಸೇವೆಗೆ ಸದಾ ಸಿದ್ಧರಿದ್ದು, ವಿದ್ಯುತ್ ಪರಿವರ್ತಕಗಳನ್ನು ಪಡೆಯಲು ತಿಂಗಳುಗಟ್ಟಲೇ ಬಾಗೇವಾಡಿಗೆ ಅಲೆಯಬೇಕಿತ್ತು. ಮೂವತ್ತು ವರ್ಷಗಳಿಂದ ಒಂದು ಕುಟುಂಬಕ್ಕೆ ಅಧಿಕಾರ ನೀಡಿರುವ ನೀವು ಒಂದು ಸಲ ನಮಗೆ ಅಧಿಕಾರ ಕೊಟ್ಟು ನೋಡಿ. ನಿಮ್ಮ ಸಮಸ್ಯೆಗಳಿಗೆ 24 ಗಂಟೆಗಳಲ್ಲಿ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಈ ಭಾಗದ ವಿದ್ಯುತ್ ಸಮಸ್ಯೆಗಳ ನಿವಾರಣೆಗಾಗಿ ಎಲಿಮುನ್ನೋಳಿ ಗ್ರಾಮದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಪ್ರಾಯೋಗಿಕ ಯೋಜನೆ ತಲೆ ಎತ್ತಲಿದೆ. ಇದರಿಂದ ಅನೇಕ ಕುಟುಂಬಗಳಿಗೆ ಪ್ರಯೋಜನವಾಗಲಿದೆ. ಈಗಾಗಲೇ 3 ತಿಂಗಳೊಳಗೆ ಸುಮಾರು ನೂರು ವಿದ್ಯುತ್ ಪರಿವರ್ತಕಗಳನ್ನು ವಿತರಿಸಿದ್ದೇವೆ. ನಿರಂತರ ಜ್ಯೋತಿ ಸಂಪರ್ಕವನ್ನು ಕಲ್ಪಿಸಿಕೊಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಹೇಳಿದರು.

ಅರಬಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಮಾತನಾಡಿ, ನಮ್ಮನ್ನು ಲಿಂಗಾಯತ ವಿರೋಧಿ ಎಂಬಂತೆ ಕೆಲ ಬಿಂಬಿಸುತ್ತಿದ್ದಾರೆ. ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತಿದ್ದರಿಂದ ಮನಸ್ಸಿಗೆ ನೋವಾಗುತ್ತಿದೆ. ನಮ್ಮ ರಾಜಕೀಯ ಇತಿಹಾಸದಲ್ಲಿ ನಾವು ಯಾವ ಸಮುದಾಯಕ್ಕೂ ಅನ್ಯಾಯ ಮಾಡಿಲ್ಲ ಎಂದರು.

ಸಂಗಮ ಕಾರ್ಖಾನೆ ಅಧ್ಯಕ್ಷ ರಾಜೇಂದ್ರ ಪಾಟೀಲ, ಹಿರಾ ಶುಗರ್ಸ್ ಅಧ್ಯಕ್ಷ ಬಸವರಾಜ ಕಲ್ಲಟ್ಟಿ, ಶಶಿರಾಜ ಪಾಟೀಲ, ರಾಜೇಂದ್ರ ಅಂಕಲಗಿ, ಸುರೇಶ ಹುಣಶ್ಯಾಳ, ಬಂಡು ಹತನೂರೆ, ಬಸವರಾಜ ಮರಡಿ, ಅಶೋಕ ಪಟ್ಟಣಶೆಟ್ಟಿ ಇತರರಿದ್ದರು.

# ಶಿಕ್ಷಣ, ಸಂಘಟನೆಗೆ ಆದ್ಯತೆ ನೀಡಿ: ಜಗದ್ಗುರು ಬಸವರಾಜ ಶ್ರೀಗಳು



**ಗುಳೇದಗುಡ್ಡ :** ಸಮಾಜದ ಶ್ರೇಯೋಭಿವೃದ್ಧಿ ಶಿಕ್ಷಣ, ಸಂಘಟನೆ ಮೇಲೆ ಅವಲಂಬಿತವಾಗಿದೆ. ಸಮಾಜ ರಾಜಕೀಯದಿಂದ ಬಲಾಢ್ಯವಾಗಿ ಬೆಳೆದಾಗ ಮಾತ್ರ ಸಮಾಜದ ಪ್ರತಿಯೊಬ್ಬರೂ ಎಲ್ಲ ಕ್ಷೇತ್ರಗಳಲ್ಲಿ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಅದಕ್ಕೆ ಶಿಕ್ಷಣ, ಉತ್ತಮ ಸಂಸ್ಕಾರ ಬಹಳಷ್ಟು ಅವಶ್ಯವಾಗಿದೆ ಎಂದು ಶ್ರೀ ಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಪಟ್ಟಣದ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠದಲ್ಲಿ ರಾಣೆಬೆನ್ನೂರಿನ ಪಟ್ಟಸಾಲಿ ನೇಕಾರ ಸಮಾಜದ ಮಹಿಳಾ ಹಾಗೂ ಪುರುಷ ಘಟಕದ ನೂತನ ಪದಾಧಿಕಾರಿಗಳಿಗೆ ಹಮ್ಮಿಕೊಂಡ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಯಾರೊಬ್ಬರೂ ದುಶ್ಚಟಗಳಿಗೆ ದಾಸರಾಗಬಾರದು. ಉತ್ತಮ ಸಂಸ್ಕಾರ, ಸಂಸ್ಕೃತಿ, ಧಾರ್ಮಿಕ ನಡೆ ನುಡಿಗಳನ್ನು ಜೀವನದಲ್ಲಿ ಅವಳಡಿಸಿಕೊಂಡು ಸಮಾಜದ ಉನ್ನತಿಗೆ ಶ್ರಮಿಸಬೇಕೆಂದು ಹೇಳಿದರು.

ಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿ, ಒಂದು ಸಮಾಜ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಬೆಳೆಯಲು ಸಮಾಜದಲ್ಲಿ ಪ್ರತಿಯೊಬ್ಬರೂ ಉನ್ನತ ಶಿಕ್ಷಣ ಪಡೆಯಬೇಕು. ಸಂಘಟನೆಯಾಗಬೇಕು. ಆ ಮೂಲಕ ಸಮಾಜವನ್ನು ವಿಶಾಲವಾಗಿ ಬೆಳೆಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಣೆಬೆನ್ನೂ-ರಿನ ಪಟ್ಟಸಾಲಿ ಮಹಿಳಾ ಘಟಕದ ಅಧ್ಯಕ್ಷೆ ವಿದ್ಯಾ ಹಮ್ಮಿಗಿ, ಉಪಾಧ್ಯಕ್ಷೆ ಪುಷ್ಪಾ ಗುತ್ತಲ, ಪ್ರಧಾನ ಕಾರ್ಯದರ್ಶಿ ಗಾಯಿತ್ರಿ ಮಾಸುರು, ಸಂಘಟನಾ ಕಾರ್ಯದರ್ಶಿ ಸವಿತಾ ಸಾಳೇರ, ಯುವಕ ಸಂಘದ ಅಧ್ಯಕ್ಷ ಶ್ರೀನಿವಾಸ ಸುರವನ್ನಿ, ಉಪಾಧ್ಯಕ್ಷ ಆನಂದ ಚೆನ್ನಿಕಟ್ಟಿ, ಕಾರ್ಯದರ್ಶಿ ಶ್ರೀನಿವಾಸ ಮಾಗಳ, ಸಂಘಟನಾ ಕಾರ್ಯದರ್ಶಿ ದೇವರಾಜ ನಳಿಮತಿ ಹಾಗೂ ಎಲ್ಲ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರಮೇಶ ಗುತ್ತಲ, ಲಕ್ಷ್ಮಣ ಸಾಲಿ, ರವಿಕುಮಾರ ಶಿವಮೊಗ್ಗಿ, ನಾಗರಾಜ ಚೆನ್ನಿಕಟ್ಟಿ, ಶ್ರೀನಿವಾಸ ಅಡ್ಮಮನಿ, ಗುಳೇದಗುಡ್ಡ ಪಟ್ಟಸಾಲಿ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ ಕಲಬುರ್ಗಿ, ಭಾಗ್ಯಾ ಉದ್ನೂರ, ಸೋಮು ಕಲಬುರ್ಗಿ, ಯಶೋಧಾ ಸರಹೊನ್ನಿ, ಗಿರೀಜಾ ಗುಡ್ಡನ್ನವರ, ಸುನಿತಾ ಬಜ್ಜಿ, ಕೋಮಲಾ ರಾಂಪೂರ, ಸವಿತಾ ಚೆನ್ನಿಕಟ್ಟಿ ಇತರರು ಇದ್ದರು.

ಬೀಳೂರು ಗುರುಬಸವ ಪತ್ತಿನ ಸಹಕಾರಿ ಸಂಘದ 25 ನೇ ಸರ್ವ ಸಾಧಾರಣ ಸಭೆ

# ಬೀಳೂರ ಗುರುಬಸವ ಪತ್ತಿನ ಸಹಕಾರಿ ಸಂಘದ ಪಾರದರ್ಶಕತೆ ಜಿಲ್ಲೆಗೆ ಮಾದರಿ: ಕಲ್ಲಪ್ಪ ಓಬಣಗೋಳ



**ಬಾಗಲಕೋಟೆ :** ನಗರದ ಬೀಳೂರ ಗುರುಬಸವ ಸಹಕಾರಿ ಸಂಘ ತನ್ನ ಪಾರದರ್ಶಕತೆಯ ಮೂಲಕ ಜಿಲ್ಲೆಗೆ ಮಾದರಿ ಸಂಸ್ಥೆಯಾಗಿದೆ ಎಂದು ಬೆಳಗಾವಿ ವಿಬಾಗದ ಸಹಕಾರಿ ಸಂಘದ ಸಂಯುಕ್ತ ನಿಬಂಧಕರಾದ ಕಲ್ಲಪ್ಪ ಓಬಣಗೊಳ ಹೇಳಿದರು.

ಅವರು ಬಿ.ವಿ.ವಿ.ಸಂಘದ ಮಿನಿ ಸಭಾ ಭವನದಲ್ಲಿ ಭಾನುವಾರ ಜರುಗಿದ ಬೀಳೂರು ಗುರುಬಸವ ಪತ್ತಿನ ಸಹಕಾರಿ ಸಂಘದ 25ನೇ ಸರ್ವ ಸಾಧಾರಣ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ಕಳೆದ 25 ವರ್ಷಗಳಿಂದ ಗಟ್ಟಿಯಾದ ಭದ್ರಬೂನಾದಿ ಹೊಂದಿರುವ ಬೀಳೂರು ಗುರುಬಸವ ಬ್ಯಾಂಕು ಸುಮಾರು 288 ಕೋಟಿಯಷ್ಟು ಠೇವಣಿ ಹೊಂದಿರುವುದಲ್ಲದೆ, ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿರುವ ಎಲ್ಲ ಸೌಲಭ್ಯಗಳನ್ನು ಹೊಂದಿ ಉತ್ತಮ ಪಾರದರ್ಶಕತೆಯ ಗುಣಮಟ್ಟದೊಂದಿಗೆ ಜಿಲ್ಲೆಗೆ ಮಾದರಿಯಾಗಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಘ ಅಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಸಂಘದ ಆರಂಭದಿಂದಲೂ ಸದಸ್ಯ-ರಿಗೆ ಶೇ.15 ರಷ್ಟು ಲಾಭಾಂಶ ನೀಡುತ್ತಿರುವ ಜಿಲ್ಲೆಯ ಏಕೈಕ ಸಂಸ್ಥೆಯಾಗಿದ್ದು, 2025 ಮಾರ್ಚ ಅಂತ್ಯಕ್ಕೆ ಒಟ್ಟು 1.92 ಕೋಟಿ. ರೂ.ನಿವ್ವಳ ಲಾಭವಾಗಿದೆ, ಒಂದು ಸಾವಿರ ಸದಸ್ಯರೊಂದಿಗೆ 20ಲಕ್ಷ ರು,ಬಂಡವಾಳದೊಂದಿಗೆ2001-02 ನೇ ಸಾಲಿನಲ್ಲಿ ಪ್ರಾರಂಭವಾದ ಸಹಕಾರಿ ಸಂಘವು, ಸದ್ಯ 7177 ಸದಸ್ಯರೊಂದಿಗೆ 32.198.09 ಕೋಟಿಗಳಷ್ಟು ದುಡಿಯವ ಬಂಡವಾಳ ಹೊಂದಿದೆ, 1,65 ಲಕ್ಷ ಇದ್ದ ನಿಧಿಗಳು ಇಂದು 29.93 ಕೋಟಿಯಷ್ಟು, 125.74 ಕೋಟಿ ರು,ಸಾಲ ನೀಡಿದೆ, ರಾಜ್ಯವ್ಯಾಪಿ ವಿವಿಧ ಸಾಲಗಳನ್ನು ಬ್ಯಾಂಕಿನಿಂದ ನೀಡಲಾಗಿದೆ, ನಗರ ಗ್ರಾಮೀಣ ಭಾಗದ ಜನರಿಗೆ ತನ್ನ ಕಾರ್ಯ ವ್ಯಾಪ್ತಿಯಲ್ಲಿ ಎಲ್ಲ ಸದಸ್ಯರಿಗೆ ವಿವಿಧ ತೆರನಾದ ಸಾಲಗಳನ್ನು ನೀಡಿದೆ, ಸದಸ್ಯರು ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡಿದ ಪರಿಣಾಮ ಸಂಘ ಲಾಭದತ್ತ ಸಾಗುತ್ತಿದೆ,

ಜೊತೆಗೆ ಸರಕಾರದಿಂದ ಯಾವುದೇ ಚಿಕಿತ್ಸೆ ಇರದ ಚಿಕ್ಕ ಮಕ್ಕಳಲ್ಲಿಕಂಡು ಬರುವ ಹಿಮೋಪೋಲಿಯಾ ಹಾಗೂ ಥೇಲಸೇಮಿಯಾ ರೋಗದ ಚಿಕಿತ್ಸೆಗಾಗಿ ಎಸ್.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿಗೆ ಬ್ಯಾಂಕ್ ವತಿಯಿಂದ 23.36 ಲಕ್ಷ ರು, ನೀಡಲಾಗುತ್ತಿದೆ, ಸಂಘ 25 ನೇ ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ವರ್ಷ ಸಂಘದ ಬೆಳ್ಳಿಹಬ್ಬವನ್ನು ಅರ್ಥಪೂರ್ಣವಾಗಿ ಆಚ-ರಿಸಲಾಗುವುದು ಎಂದರು.

ಸಭೆಯಲ್ಲಿ ಉಪಾಧ್ಯಕ್ಷರಾದ ಮುರಗೆಪ್ಪ ನಾರಾ, ವ್ಯವಸ್ಥಾಪಕಾರದ ಎಮ್.ಎಚ್. ಹಿರೇಮಠ. ನಿರ್ದೇಶಕರಾದ ಗುರು ಬಸವ ಸೂಳಿಭಾವಿ, ಈರಣ್ಣ ಅಥಣಿ, ಲಕ್ಷ್ಮೀ ನಾರಾಯಣ ಕಾಸಟ್,ವಿ-ಜಯಕುಮಾರ ಅಂಗಡಿ, ವೀರಣ್ಣ ಹಲಕುರ್ಕಿ, ಶ್ರೀಶೈಲ ಅಂಗಡಿ, ಕುಮಾರ ಯಳ್ಳಿಗುತ್ತಿ, ಅಶೋಕ ಸಜ್ಜನ ಬೇವೂರ, ಮಲ್ಲಿಕಾರ್ಜುನ ಸಾಸನೂರ, ಪ್ರಕಾಶ ರೇವಡಿಗಾರ,ಪ್ರಭುಸ್ವಾಮಿ ಸರಗಣಾಚಾರಿ, ರುದ್ರು ಅಕ್ಕಿಮರಡಿ, ಜಯಪ್ರಕಾಶ ಬೆಂಡಿಗೇರಿ, ರಾಜು ನಾಯ್ಕರ, ಶ್ರೀಮತಿ ಭಾಗ್ಯಶ್ರೀ ಹಂಡಿ, ರೇಖಾ ಮೊರಬದ ಸೇರಿದಂತೆ ಅನೇಕರು ಭಾಗವಹಸಿದ್ದರು,

# ಬೇವಿನಮಟ್ಟಿಯಲ್ಲಿ ಸ್ವಚ್ಛತಾ ಹಿ ಸೇವಾ ಕಾರ್ಯಕ್ರಮ

**ಬಾಗಲಕೋಟೆ:**ತಾಲೂಕಿನ ಬೇವಿನಮಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರಕಾಖಇ ಪ್ರಾಥಮಿಕ ಶಾಲೆ ಆವರಣದಲ್ಲಿ ಸ್ವಚ್ಛತಾ ಹಿ ಸೇವಾ ಕಾರ್ಯಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಸ್ವಚ್ಛತೆಯ ಬಗ್ಗೆ ಪ್ರಮಾಣ ವಚನ ಸ್ವೀಕರಿಸಲಾಯಿತು. ನಂತರ ಸರಕಾರಿ ಪ್ರೌಢ ಶಾಲೆಯಲ್ಲಿ ಕಂಪ್ಯೂಟರ್ ಕೇಂದ್ರ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಿ.ಪಂ ಯೋಜನಾ ನಿರ್ದೇಶಕ ಎಸ್.ಸಿ.ಕಾಂಬಳೆ, ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಸೇರಿದಂತೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಶಾಲಾ ಶಿಕ್ಷಕರು ಹಾಗೂ ಇತರರು ಉಪಸ್ಥಿತರಿದ್ದರು.



# ಮುಖ್ಯಮಂತ್ರಿ ಬಳಿ ಮತ್ತೊಮ್ಮೆ ನಿಯೋಗ: ತಂಗಡಗಿ



**ಕೊಪ್ಪಳ :** 'ಜಿಲ್ಲಾಕೇಂದ್ರದ ಬಳಿ ಈಗಾಗಲೇ ಸಾಕಷ್ಟು ಕಾರ್ಖಾನೆಗಳು ಇದ್ದು, ಇವುಗಳ ಪರಿಣಾಮ ಜನರ ಆರೋಗ್ಯ ಮೇಲಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ವಿಷಯವನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ಮತ್ತೊಮ್ಮೆ ತರಲಾಗುವುದು. ಅವರ ಬಳಿ ಇನ್ನೊಮ್ಮೆ ನಿಯೋಗ ತೆಗೆದುಕೊಂಡು ಹೋಗಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ 'ಬೃಹತ್ ಕೈಗಾರಿಕಾ ಸಚಿವರು ಹಿಂದಿನವರು ನೀಡಿದ ಪರವಾನಿಗೆಯನ್ನು ರದ್ದು ಪಡಿಸಬೇಕು.

ಕೊಪ್ಪಳದಲ್ಲಿ ಈಗಿರುವ ಕಾರ್ಖಾನೆಗಳೇ ಸಾಕು' ಎಂದರು.

ಜಿಲ್ಲೆಗೆ ಮತ್ತೆ ಹೊಸ ಕಾರ್ಖಾನೆಗಳು ಬೇಡವೆಂದು ಈಗಾಗಲೇ ಮನವಿ ಮಾಡಿದ್ದೇವೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಭೆ ಮಾಡಲು ಮುಖ್ಯಮಂತ್ರಿ ಸೂಚಿಸಿದ್ದಾರೆ. ಆ ಸಭೆಯಲ್ಲಿ ಮತ್ತೊಮ್ಮೆ ಮನವರಿಕೆ ಮಾಡುತ್ತೇವೆ. ಕೆಲ ಕಾರ್ಖಾನೆವರು ಪರವಾನಗಿ ಪಡೆದಿದ್ದಾರೆ. ಈ ಬಗ್ಗೆಯೂ ಚರ್ಚಿಸಲಾಗುವುದು' ಎಂದು ತಿಳಿಸಿದರು. ಮುಕ್ಕುಂದ ಸಮಿ ಕಂಪನಿ ವಿಸ್ತರಣೆಗೆ ಪರವಾನಗಿ ನೀಡಿದ್ದು, ಅಧಿವೇಶನ ವೇಳೆ ಜಿಲ್ಲೆಯ ಜನರ ಅಭಿಪ್ರಾಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇವೆ. ಮತ್ತೊಂದು ನಿಯೋಗ ಕರೆದೊಯ್ದು ಒತ್ತಾಯಿಸುತ್ತೇವೆ. ಕಾರ್ಖಾನೆ ವಿಸ್ತರಣೆಗೆ ಅನುಮತಿ ಲಭಿಸಿದ್ದರೂ ಜನರ ಹಿತದೃಷ್ಟಿಯಿಂದ ರದ್ದುಪಡಿಸಬೇಕಾಗುತ್ತದೆ. ಇದಕ್ಕೆ ಎದುರಾಗುವ ಕಾನೂನು ತೊಡಕುಗಳ ಬಗ್ಗೆಯೂ ಚರ್ಚಿಸಲಾಗುವುದು' ಎಂದು ಹೇಳಿದರು.

ಬಿಜೆಪಿಯವರಿಗೆ ಪರಿಶಿಷ್ಟರ ಬಗ್ಗೆ ಹಾಗೂ ಸಮಾಜದ ಕಟ್ಟಕಡೆಯವರ ಬಗ್ಗೆ ಮಾತನಾಡುವ ಹಕ್ಕಿಲ್ಲ. ಕಾಂತರಾಜ್ ವರದಿ ತಯಾರಿಸಿದ ಏಳು ವರ್ಷಗಳ ತನಕ ಬಿಜೆಪಿಯವರು ಯಾಕೆ ಸುಮ್ಮನಿದ್ದರು?. ಸಮೀಕ್ಷೆ ಬಳಿಕ ನಿಖರತೆ ತಿಳಿಯಲಿದೆ. ಕಳೆದ ಬಾರಿ ಸಮೀಕ್ಷೆಯಿಂದ ಕೆಲವರನ್ನು ಕೈ ಬಿಡಲಾಗಿತ್ತು ಎನ್ನುವ ಆರೋಪ ಕೇಳಿ ಬಂದಿತ್ತು. ವರದಿ ನಿಖರವಾಗಿ ಆದರೆ ಹೇಗೆ ಎನ್ನುವ ಭಯ ಬಿಜೆಪಿಯವರಿಗೆ ಇದೆ' ಎಂದರು.

# ರಾಜ್ಯಪಾಲರಿಂದ ಎಂ.ಪಿ ಐಶ್ವರ್ಯಗೆ ಪಿ ಹೆಚ್ ಡಿ ಡಾಕ್ಟರೇಟ್ ಪದವಿ ಪ್ರಧಾನ



**ಕೊಪ್ಪಳ :** ಇಲ್ಲಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಎಚ್. ಪ್ರಾಣೇಶ್ ಯವರ ಸುಪುತ್ರಿ ಹಾಗೂ ಕೊಲ್ಹಾಪುರದ ಡೆಪ್ಯೂಟಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರವೀಣ್ ಗಾಯಕವಾಡ ರವರ ಪತ್ನಿ ಎಂ, ಪಿ, ಐಶ್ವರ್ಯ ರವರಿಗೆ ಗಣಕಯಂತ್ರ ವಿಭಾಗದ ಮಶಿನರಿ ಲರ್ನಿಂಗ್ ಪ್ರಬಂಧ ಪ್ರಕಟಣೆ ವಿಷಯದಲ್ಲಿ ಪೀ ಎಚ್‌ಡಿ ಡಾಕ್ಟರೇಟ್ ಪದವಿ ಲಭಿಸಿತು, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವತಿಯಿಂದ ಇತ್ತೀಚಿಗೆ ಜರುಗಿದ 13ನೇ ಘಟಿಕೋತ್ಸವ ದಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲರಾದ ತಾವರ್ ಚಂದ್ ಗೆಹಲೋಟ್ ರವರು ಐಶ್ವರ್ಯ ರವರಿಗೆ ಪಿ ಎಚ್ ಡಿ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿದ್ದರು. ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಗಣಕಯಂತ್ರ ಮೆಷಿನರಿ ಲರ್ನಿಂಗ್ ವಿಭಾಗದ ಮುಖ್ಯಸ್ಥ ಡಾ, ಪದ್ಮನಾಭ ರೆಡ್ಡಿ ರವರ ಮಾರ್ಗದರ್ಶನದಲ್ಲಿ ಐಶ್ವರ್ಯ ರವರು ಪ್ರಬಂಧ ಮಂಡನೆ ಮಾಡಿ ಡಾಕ್ಟರೇಟ್ ಪಿ ಎಚ್ ಡಿ ಪದವಿ ಪಡೆದುಕೊಂಡಿದ್ದಾರೆ.

ಎಂ.ಪಿ .ಐಶ್ವರ್ಯ ರವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಣವನ್ನು ನಗರದ ಟ್ರಿನಿಟಿ ಶಾಲೆಯಲ್ಲಿ ಪೂರೈಸಿ ನಂತರ ಸ್ವಾಮಿ ವಿವೇಕಾನಂದ ಪಿಯು ಕಾಲೇಜ್ ನಲ್ಲಿ ವಿಜ್ಞಾನ ಪಿಯುಸಿ ಅಭ್ಯಾಸ ಮಾಡಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಬಿಎಸ್ಸಿ ಮತ್ತು ಎಂ ಎಸ್ ಸಿ ಪದವಿ ಪಡೆದುಕೊಂಡಿರುವುದನ್ನು

ಇಲ್ಲಿ ಸ್ಮರಿಸಬಹುದಾಗಿದೆ ,ಎಂ.ಪಿ. ಐಶ್ವರ್ಯ ರವರಿಗೆ ಪಿ ಎಚ್ ಡಿ ಡಾಕ್ಟರೇಟ್ ಪದವಿ ಲಭಿಸಿರುವುದಕ್ಕೆ ಕೊಪ್ಪಳದ ವಿವಿಧ ಸಂಘಟನೆಗಳು ಶಿಕ್ಷಣ ಕ್ಷೇತ್ರದ ಅಧಿಕಾರಿ ವರ್ಗ, ಶಿಕ್ಷಕರು, ಸ್ನೇಹಿತರ ಬಳಗ ಅಭಿಮಾನಿ ಬಳಗ ಅಪಾರ ಮೆಚ್ಚುಗೆ ಮತ್ತು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಶಿವಯೋಗಿಗಳ 158 ನೇ ಜಯಂತಿ: ಸದ್ಭಾವನಾ ಯಾತ್ರೆ



**ಗಂಗಾವತಿ:**ತಾಲೂಕು ವೀರಶೈವ-ಲಿಂಗಾಯತ ಮಹಾಸಭಾ ಘಟಕದಿಂದ ಹಮ್ಮಿಕೊಳ್ಳಲಾಗಿರುವ ಹಾನಗಲ್ ಕುಮಾರ ಮಹಾ ಶಿವಯೋಗಿಗಳ 158 ನೇ ಜಯಂತಿ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಸದ್ಭಾವನಾ ಯಾತ್ರೆ ರವಿವಾರ ಬೆಳಿಗ್ಗೆ ನಗರದಲ್ಲಿ ಅದ್ದೂರಿಯಾಗಿ ನಡೆಯಿತು.ಬಡಾವಣೆಯ ಎಲ್ಲಾ ರಸ್ತೆಗಳಲ್ಲಿ ಶ್ರೀಗಳು ಪಾದಯಾತ್ರೆ ನಡೆಸಿದರು.ಎಲ್ಲಾ ಬಡಾವಣೆಗಳಲ್ಲಿ ಅಲ್ಲಿಯ ನಿವಾಸಿಗಳು ಸಕ್ರೀಯವಾಗಿ ಭಾಗವಸಿದ್ದರು. ತಳಿರು ತೋರಣ,ರಂಗೋಲೆಯಿಂದ ಎಲ್ಲಾ ರಸ್ತೆಗಳನ್ನು ಸಿಂಗರಿಸಲಾಗಿತ್ತು.ಮಹಾ ಸಭೆಯ ತಾಲೂಕು ಅಧ್ಯಕ್ಷ ಗಿರೇಗೌಡ ಹೊಸ್ಕೇರಾ,ಉಪಾಧ್ಯಕ್ಷ ಶರಣೇಗೌಡ ಮಾಲಿ ಪಾಟೀಲ್, ಮುಷ್ಟಿ ವಿರುಪಾಕ್ಷಪ್ಪ ,ಪ್ರಧಾನ ಕಾರ್ಯದರ್ಶಿ ಮನೋಹರ ಸ್ವಾಮಿ ಹಿರೇಮಠ, ಜಂಟಿ ಕಾರ್ಯದರ್ಶಿ ಸಂಧ್ಯಾ ಅಶೋಕಸ್ವಾಮಿ ಹೇರೂರ, ಸದಸ್ಯರಾದ ಕರಬಸಪ್ಪ ಬೂದಗುಂಪಿ,ಪ್ರಮುಖರಾದ ಪರಣ್ಣ ಮುನವಳ್ಳಿ, ಶಶಿಧರಸ್ವಾಮಿ ಮುದೇನೂರು ಹಿರೇಮಠ,ವಿರುಪಾಕ್ಷಪ್ಪ ಸಿಂಗನಾಳ, ಸಿದ್ಧರಾಮಯ್ಯ ಸ್ವಾಮಿ ಸಂಗಾಪೂರ,ನ್ಯಾಯವಾದಿಗಳಾದ ತಿಪ್ಪೆರುದ್ರಸ್ವಾಮಿ,ಕವಿತಾ ಗುರುಮೂರ್ತಿ,ವಿರೇಶಪ್ಪ ಕಮಲಾಪೂರ,ವಿರೇಶಪ್ಪ ಬಾದನಟ್ಟಿ, ಶ್ಯಾಮ ಮೂರ್ತಿ ಐಲಿ,ಅಮರೇಗೌಡ, ಮಹಾಲಿಂಗಪ್ಪ ಬನ್ನಿಕೊಪ್ಪ, ಶಾಂತಮಲ್ಲಯ್ಯ,ಸಂಗಯ್ಯ ಸಂಶಿಮಠ,ರಂಗಣ್ಣ ದರೋಜಿ,ಜೋಗದ ನಾರಾಯಣಪ್ಪ ,ವೀರಭದ್ರ??ಪ ನಾಯಕ ಸೇರಿದಂತೆ ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.ಮಹಿಳಾ ಘಟಕದ ಅಧ್ಯಕ್ಷೆ ನಂದಿನಿ ಮುದಗಲ್,ಪ್ರಧಾನ ಕಾರ್ಯದರ್ಶಿ ಶಿಲ್ಪಾ ಶ್ರೀನಿವಾಸ,ಮಂಜುಳಾ ಗಾಳಿ, ಸುಮಾ ಮಸ್ಕಿ,ವಿಮಲಾದೇವಿ ಹಿರೇ ಜಂತಕಲ್,ಪ್ರತಿಭಾ ಸಿಂಗನಾಳ,ಚಂದ್ರಕಲಾ ಮುಂತಾದವರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನ ವಡ್ಡರಹಟ್ಟಿ ಮತ್ತು ಆರ್ಹಾಳ ಗ್ರಾಮಗಳಲ್ಲಿಯೂ ಶ್ರೀಗಳ ಪಾದಯಾತ್ರೆಯನ್ನು ಊರಿನ ಹಿರಿಯರು,ಯುವಕರು ಮತ್ತು ಮಹಿಳೆಯರು ಪಾಲ್ಗೊಂಡು ಸಧ್ಭಾವನಾ ಯಾತ್ರೆಯನ್ನು ಅದ್ದೂರಿಯಿಂದ ಸ್ವಾಗತಿಸಿದರು.

# ಕೊಪ್ಪಳ ನಗರಸಭೆ ಅಧ್ಯಕ್ಷರ ಸಹೋದರ, ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ




**ಕೊಪ್ಪಳ :** ಆದಾಯಕ್ಕಿಂತಲೂ ಹೆಚ್ಚು ಆಸ್ತಿ ಗಳಿಸಿದ ಮತ್ತು ಹಲವು ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರದ ಆರೋಪ ಕೇಳಿಬಂದಿದ್ದರಿಂದ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಇಲ್ಲಿನ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಸಹೋದರ ಶಕೀಲ್ ಪಟೇಲ್ ಹಾಗೂ ಅಧಿಕಾರಿಗಳ ಮನೆ ಮೇಲೆ ದಾಳಿ ನಡೆಸಿದ್ದಾರೆ.

ಕಳೆದ ವರ್ಷ ನಡೆದ 300ಕ್ಕೂ ಹೆಚ್ಚು ಕಾಮಗಾರಿಗಳಲ್ಲಿ ಸುಮಾರು 10 ಕೋಟಿಗೂ ಹೆಚ್ಚು ಭ್ರಷ್ಟಾಚಾರ ಆಗಿದೆ ಎನ್ನುವ ಆರೋಪದ ಬಗ್ಗೆ ತನಿಖೆ ನಡೆಯುತ್ತಿದೆ.

ಈ ಬಗ್ಗೆ ಲೋಕಾಯುಕ್ತಕ್ಕೂ ಕೆಲವರು ದೂರು ಸಲ್ಲಿಸಿದ್ದರು. ಮಂಗಳವಾರ ಬೆಳಿಗ್ಗೆಯಿಂದಲೇ ಲೋಕಾಯುಕ್ತ ಅಧಿಕಾರಿಗಳ ಒಂದು ತಂಡ ನಗರಸಭೆ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ.

ಇನ್ನುಳಿದ ತಂಡಗಳು ನಗರಸಭೆಯ ಜೆ.ಇ. ಸೋಮಲಿಂಗಪ್ಪ ಮನೆಯಿರುವ ಇಲ್ಲಿನ ಶಿವಗಂಗಾ ನಗರ, ಆರ್.ಐ. ಉಜ್ವಲ್ ಹಾಗೂ ಪ್ರವೀಣ್ ಕಂದಾರಿ ಸೇರಿದಂತೆ ವಿವಿಧೆಡೆ ತಪಾಸಣೆಯಲ್ಲಿ ತೊಡಗಿವೆ.

ದಾಖಲೆಗಳ ಪರಿಶೀಲನೆ ಕಾರ್ಯ ನಡೆಯುತ್ತಿದ್ದು, ಪೂರ್ಣಗೊಂಡ ಬಳಿಕ ಮಾಹಿತಿ ಸಿಗಲಿದೆ' ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

# ಇನ್ನರ್ ವೀಲ್ ಸಂಸ್ಥೆ: ಉಚಿತ ಹೃದಯ ತಪಾಸಣಾ ಶಿಬಿರ



**ಕೊಪ್ಪಳ :** ನಗರದ ಗೌರಿ ಅಂಗಳದಲ್ಲಿರುವ ಬ್ರಹ್ಮನವಾಡಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಇನ್ನರ್ ವೀಲ್ ಸಂಸ್ಥೆಯಿಂದ ಉಚಿತ ಹೃದಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.ಇನ್ನರ್ ವೀಲ್ ಸಂಸ್ಥೆಯ ಅಧ್ಯಕ್ಷರಾದ ಮಧು ಶೆಟ್ಟರ್ ಮಾತನಾಡಿ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ಧಾರವಾಡದ ಎಸ್ ಡಿ ಎಂ ವೈದ್ಯರಾದ ಡಾ. ಮಹಾಂತೇಶ್ ಉಳ್ಳಾಗಡ್ಡಿ ಅವರು ಹೃದಯ ತಪಾಸಣೆಯನ್ನು ನಡೆಸಿದರು ಸುಮಾರು 250 ಕ್ಕೂ ಹೆಚ್ಚು ಜನರು ಇದರ ಸದುಪಯೋಗವನ್ನು ಪಡೆದುಕೊಂಡರು. ಚಿಕ್ಕ ಮಕ್ಕಳಿಂದ ಎಲ್ಲರಿಗೂ ಹೃದಯದ ತೊಂದರೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ವೈದ್ಯರು ಹೇಳುವ ಒಳ್ಳೆಯ ಸಲಹೆಗಳನ್ನು ಅಳವಡಿಸಿಕೊಂಡು ಸದೃಢವಾದ, ಆರೋಗ್ಯವಾದ ಜೀವನ ನಡೆಸಿ ಉಚಿತವಾಗಿ ಬಿ, ಪಿ, ಶುಗರ್, ಈ ಸಿಜಿ, ಎಕೋ ಟೆಸ್ಟ್ ಗಳನ್ನು ನಡೆಸಿ ಹೆಚ್ಚಿನ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟವರನ್ನು ಖಆಂ ಹಾಸ್ಪಿಟಲ್ ನಲ್ಲಿ ತೋರಿಸಲು ಅನುಕೂಲತೆ ಮಾಡಿಕೊಡುವರು ಎಂದು ತಿಳಿಸಿದರು. ಇನ್ನರ್ ವಿಲ್ ಸಂಸ್ಥೆಯವರು ತುಂಬಾ ಸಾಮಾಜಿಕ ಕಾರ್ಯಕ್ರಮಗಳನ್ನ ಮಾಡುತ್ತ ಇವರ ಒಳ್ಳೆ ಪ್ರಯತ್ನಕ್ಕೆ ಯಾವಾಗಲೂ ಜಯ ಸಿಗಲಿ ಎಂದು ಡಾ. ಮಹಾಂತೇಶ್ ಉಳ್ಳಾಗಡ್ಡಿ ಹೇಳಿದರು .ಹಿರಿಯರಾದ ಡಾ. ರಾಧಾ ಕುಲಕರ್ಣಿ, ಡಾ. ಕಸ್ತೂರಿ ಕರಮುಡಿ, ಡಾ. ಕವಿತಾ ಹ್ಯಾಟಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಂಸ್ಥೆಯ ಪದಾಧಿಕಾರಿಗಳಾದ ರೇಖಾ, ಮೀನಾಕ್ಷಿ, ಸುವರ್ಣ, ಹೇಮಾ, ಸುಧಾ ಡಿಸ್ಟಿಕ್ ಖಥಿ ಶರಣಮ್ಮ, ಹಾಗೂ ಸುಮಾರು 40 ಜನ ಸದಸ್ಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು,ಕಾರ್ಯಕ್ರಮ ದ ನಿರೂಪಣೆಯನ್ನು ಮಾಜಿ ಅಧ್ಯಕ್ಷರಾದ ಮಮತಾ ಶೆಟ್ಟರ್ ನೆರವೇರಿಸಿದರು.

# ಮಕ್ಕಳ ಸ್ವಾವಲಂಬಿ ಭವಿಷ್ಯ ಹಾಗೂ ಉತ್ತಮ ಸಮಾಜ ನಿರ್ಮಿಸುವಲ್ಲಿ ಪೋಷಕರ ಪಾತ್ರ ಮಹತ್ವದ್ದು

ಶಿಕ್ಷಣದಲ್ಲಿ ಮೌಲ್ಯಧಾರಿತ, ಚಾರಿತ್ರ್ಯ ನಿರ್ಮಾಣ ಹಾಗೂ ನೈತಿಕ ಶಿಕ್ಷಣ ವಿಲ್ಲದಿದ್ದರೆ ಶಿಕ್ಷಣ ಸಂಸ್ಥೆಯಲ್ಲಿ ಬೆಳೆಯೋ ವಿದ್ಯಾರ್ಥಿಗಳುಸಮಾಜದಬಗ್ಗೆನಿರ್ಲಕ್ಷವನ್ನ ತಾಳುವುದರ ಜೊತೆಗೆ, ಮನುಷ್ಯತ್ವ ಹಾಗೂ ಮಾನವೀಯ ನೆಲೆಗಟ್ಟಿನಲ್ಲೂ ಯೋಚನೆ ಮಾಡುವ ಪರಿಸ್ಥಿತಿಯಿಂದ ಬಹಳ ದೂರವೇ ಉಳಿದಿರುತ್ತಾರೆ.

ಬಹುಶಃ ಇದಕ್ಕೆ ಮುಖ್ಯ ಕಾರಣ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿನ ದೋಷಗಳು, ಅರ್ಥಾತ್ ಅಂಕ ಆಧಾರಿತ ಶಿಕ್ಷಣವನ್ನು ಎಲ್ಲಾ ಕಡೆಗಳಲ್ಲೂ ಬೋಧಿಸಲಾಗುತ್ತದೆ,.

ಇದಕ್ಕೆ ಒತ್ತು ನೀಡುವಂತೆ ಪೋಷಕರ ಮನಸ್ಥಿತಿಯೂ ಕೂಡ ಅದೇ ಆಗಿರುತ್ತದೆ. ನಮ್ಮ ಮಕ್ಕಳು ಓದಿ ದೊಡ್ಡ ಸಾಫ್ಟ್ ವೇರ್ ಇಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕು ಒಳ್ಳೆಯ ಕಂಪನಿಯಲ್ಲಿ ಉದ್ಯೋಗಪಡೆದು ವಿದೇಶಕ್ಕೆಹೋಗಬೇಕು ಎನ್ನುವ ಮಹತ್ವಕಾಂಕ್ಷೆಯನ್ನು ಹಲವರು ಹೊಂದಿರುತ್ತಾರೆ, ಆದರೆ ನಮ್ಮ ಮಕ್ಕಳು ಅವರು ಬದುಕುವುದರ ಜೊತೆಗೆ ಸಮಾಜದ ಹಿತಕ್ಕಾಗಿ ಬದುಕಲಿ, ಒಬ್ಬ ಭಗತ್ ಸಿಂಗ್ ತರಹ ಆಗಲಿ ಅಥವಾ ಸ್ವಾಮಿ ವಿವೇಕಾನಂದರ ರೀತಿ ಆಗಲಿ ಎಂದು ಯಾರೂ ಬಯಸುವುದಿಲ್ಲ.. ಒಟ್ಟಿನಲ್ಲಿ ಮಕ್ಕಳು ಅತ್ಯಂತ ಉನ್ನತ ಉದ್ಯೋಗ ಪಡೆದು ವಿದೇಶದಲ್ಲೋ, ದುಬೈನಲ್ಲೋ ಇದ್ದಾರೆಂದರೆ ಅಂತಹ ಪೋಷಕರನ್ನು ಹಿಡಿಯಲೂ ಆಗುವುದಿಲ್ಲ,. ಕುಂತರೂ ನಿಂತರೂ ಮಕ್ಕಳ ಸ್ಟೇಟಸ್ ಬಗ್ಗೆ ಸಿಕ್ಕಂತಹ ನಾಲ್ಕು ಜನರಿಗೆ ಹೇಳುತ್ತಿರುತ್ತಾರೆ. ಫಾರಿನ್ ವಿದೇಶಗಳಲ್ಲಿ ಮಕ್ಕಳು ಇರಬೇಕು ಎನ್ನುವ ಮನಸ್ಥಿತಿ ಸಮಾಜದಲ್ಲಿನ ಅತ್ಯುನ್ನತ ಸ್ಟೇಟಸ್ ಎಂದೇ ಭಾವಿಸುವವರ ಸಂಖ್ಯೆ ಸಾಕಷ್ಟಿದೆ,.

ಅಪರೂಪಕ್ಕೆ ಅಥವಾ ವಿರಳವಾಗಿ ಅಲ್ಲೋ ಇಲ್ಲೋ ಕೆಲವರು ಸಂಸ್ಕಾರ ಯುತ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡಲು ಮುಂದಾಗುತ್ತಾರೆ,, ಅದು ಕೇವಲ ಒಳ್ಳೆಯ ಮಠಮಾನ್ಯಗಳಲ್ಲಿ ಸಂಸ್ಕಾರಯುತ ಶಿಕ್ಷಣವನ್ನು ಕೊಡಿಸಿದಾಗ ಮಕ್ಕಳಲ್ಲಿ ಸಾಮಾಜಿಕ ಹಾಗು ಮಾನವೀಯ ಮೌಲ್ಯಗಳನ್ನು ಬೆಳೆಸಲು ಸಾಧ್ಯವಿರುತ್ತದೆ.. ಎಂಬುದು ತಿಳಿಯಬೇಕಾದ ವಿಚಾರ.

ಇಂದಿನ ಒತ್ತಡದ ದಿನಗಳಲ್ಲಿ ತಂದೆ ತಾಯಂದಿರೂ ಕೂಡ ಅವರವರ ಕೆಲಸದಲ್ಲಿ ಬ್ಯುಸಿಯಾಗಿದ್ದು, ಮಕ್ಕಳ ಓದಿನ ಬಗ್ಗೆಯೂ ಹೆಚ್ಚುತಲೆ ಕೆಡಿಸಿಕೊಳ್ಳುವುದಿಲ್ಲ,. ಬಡ ಹಾಗೂ ಸಾಮಾನ್ಯ ಮಧ್ಯಮ ವರ್ಗದ ಜನರು ತಮ್ಮ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಅವರು ಕೂಡ ಇತರ ಕೂಲಿಕೆಲಸಗಳಲ್ಲಿತೊಡಗಿಕೊಂಡಿರುತ್ತಾರೆ. ಅವರು ಯಾವುದೇ ಕಾರಣಕ್ಕೂ ಮಕ್ಕಳನ್ನು ಶಾಲೆಯ ಸಮಯಕ್ಕೆ ಶಾಲೆಗೆ ಕರೆದು-ಕೊಂಡು ಬರುವುದು ಶಾಲೆಯ ನಂತರ ಮನೆಗೆ ಕರೆದುಕೊಂಡು ಹೋಗುವುದು ಇದ್ಯಾವುದನ್ನು ಸಹ ಮಾಡುವುದಿಲ್ಲ, ಈ ಅಂಶಗಳು ಅಂತಹ ಬಡವರ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಮಾಜದಲ್ಲಿ ಅವರಿಗೆ ಧೈರ್ಯ ಹೆಚ್ಚಲು ಕಾರಣವಾಗುತ್ತದೆ, ಆದರೆ ಖಾಸಗಿ ಶಾಲೆಯಲ್ಲಿ ನಮ್ಮ ಮಕ್ಕಳ ವಿಚಾರದಲ್ಲಿಶಾಲೆಯವ್ಯಾನ್ ಮುಖಾಂತರ ಮಕ್ಕಳನ್ನು ಸರಿಯಾದ ಶಾಲೆಯ ಸಮಯಕ್ಕೆ ಅಲ್ಲಿಗೆ ಬಿಡುವುದು ಶಾಲೆ ಬಿಟ್ಟ ನಂತರ ಮತ್ತೆ ಮನೆಗೆ ಕರೆತರುವುದು ಇದು ಅವರ ದಿನನಿತ್ಯದ ಕಾಯಕವಾಗಿರುತ್ತದೆ. ಈ ತರಹದ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಮಾಜದಲ್ಲಿ ಏಕಾಂಗಿಯಾಗಿ ಓಡಾಡುವ ಧೈರ್ಯ ಕುಂಠಿತವಾಗಿರುತ್ತದೆ.

ಇದಕ್ಕೆ ಉದಾಹರಣೆ ಎಂಬಂತೆ ಒಮ್ಮೆ ನಾನು ಪ್ರತಿಷ್ಠಿತ ಡಿಗ್ರಿ ಕಾಲೇಜು ಒಂದ-ಕ್ಕೆ ಭೇಟಿ ನೀಡಿದ್ದೆ, ಅಲ್ಲಿ ಕೆಲವರನ್ನು ಮಾತನಾಡಿಸುತ್ತಿರುವಾಗ, ಕಾಲೇಜು ಬಿಟ್ಟ ಅರ್ಧ ಗಂಟೆ ನಂತರವೂ ಇಬ್ಬರು ಹೆಣ್ಣು ಮಕ್ಕಳು ಕೂಡ ಅಲ್ಲೇ ನಿಂತಿದ್ದರು, ನಾನು ಅವರನ್ನು ವಿಚಾರಿಸಿದೆ ಕಾಲೇಜು ಬಿಟ್ಟು ಅರ್ಧ ಗಂಟೆ ಆಯ್ತು ಏಕೆ ಇಲ್ಲಿಯೇ ನಿಂತಿದ್ದೀರಾ ಎಂದು? ಆಗ ಆ ಹೆಣ್ಣು ಮಗು ಹೀಗೆ ಉತ್ತರಿಸಿತು, ಸರ್, ಅಮ್ಮ ಬರುತ್ತಾರೆ ಕರೆದುಕೊಂಡು ಹೋಗಲು ಎಂದು, ಆಗ ನಾನು ಮರು ಪ್ರಶ್ನಿಸಿದೆ ನೀವು ಒಬ್ಬರೇ ಹೋಗುವುದಕ್ಕೆ ಆಗುವುದಿಲ್ಲವೇ ಮನೆಗೆ? ಆಗ ಆ ಹೆಣ್ಣು ಮಗು ಉತ್ತರಿಸಿತು. ಸರ್,ಎಲ್ ಕೆ ಜಿ, ಯು ಕೆ ಜಿ ಯಿಂದಲೂ ಕೂಡ ಪ್ರತಿ ದಿನವೂ ಅಮ್ಮನೇ ನನ್ನನ್ನು ಕ-ರೆದುಕೊಂಡು ಬರುವುದು ಕರೆದುಕೊಂಡು ಹೋಗುವುದು,ಹಾಗಾಗಿ ನಾನು ಒಂದು ದಿನವೂ ಕೂಡ ನಾನಾಗಿಯೇ ಮನೆಗೆ ಹೋಗುವುದಿಲ್ಲ ಇಲ್ಲಿಂದ ಮನೆ ಕೇವಲ ಅರ್ಧ ಕಿಲೋಮೀಟರ್ ಮಾತ್ರವೇ ಇದೆ ಅಮ್ಮ ಬಹುಶಃ ಈಗ ನಡೆದುಕೊಂಡು ಬರುತ್ತಿದ್ದಾರೆ ಅನಿಸುತ್ತೆ, ಬಂದ ನಂತರ ಅವರ ಜೊತೆ ಹೋಗುತ್ತೇನೆ ಎಂದರು,, ಈ ವಿಚಾರವನ್ನು ನಾನು ಆಲೋಚಿಸಿದಾಗ ಮಕ್ಕಳನ್ನು ಈ ರೀತಿ ಬೆಳೆಸಿದಾಗ ಅವರು ಸಮಾಜದಲ್ಲಿ ಸ್ವತಂತ್ರವಾಗಿ ಬದುಕುವ ಧೈರ್ಯ ಎಲ್ಲಿಂದ ತಾನೇ ಬಂದೀತು.? ಈ ರೀತಿ ಖಾಸಗಿ ಶಾಲೆಯ ಮಕ್ಕಳನ್ನು ನಮ್ಮ ಸರ್ಕಾರಿ ಶಾಲೆಯ ಮಕ್ಕಳಿಗೆ ಹೋಲಿಸಿದರೆ ನಮ್ಮ ಸರ್ಕಾರಿ ಶಾಲೆಯ ಮಕ್ಕಳು ಎಷ್ಟೋ ಉತ್ತಮವಲ್ಲವೇ, ಅವರಲ್ಲಿ ಆತ್ಮವಿಶ್ವಾಸ ಹೇಗಿರುತ್ತದೆ ಎಂದರೆ ಎಲ್ಲಾ ಕಡೆಗೂ ಒಬ್ಬೊಬ್ಬರೇ ಹೋಗುತ್ತಿರುತ್ತಾರೆ, ಎಲ್ಲಾ ರೀತಿ ಆಟಗಳನ್ನು ಸಹ ಆಡುತ್ತಾ-ರೆ. ಡಿಗ್ರಿಗೆ ಬರುವುದರ ಒಳಗೆ ಅವರು ಸಮಾಜದಲ್ಲಿ ಸ್ವಾವಲಂಬಿಯಾಗಿ ಬೆಳೆದು ಆತ್ಮವಿಶ್ವಾಸ ಹಾಗೂ ಸಮಾಜದಲ್ಲಿ ಹೊಂದಾಣಿಕೆಯಿಂದ ಒಬ್ಬರೇ ಜೀವಿಸುವ ಧೈರ್ಯವನ್ನು ರೂಡಿಸಿಕೊಂಡಿರುತ್ತಾರೆ.

ಮತ್ತೊಂದುಘಟನೆನನಗೆನೆನಪಿಗೆಬರುತ್ತದೆ, ಒಂದು ವಿದ್ಯಾಸಂಸ್ಥೆಯಲ್ಲಿ ಪರಿಚಿತವಿರುವ ಮುಖ್ಯಸ್ಥರೊಬ್ಬರು ಒಮ್ಮೆ ನನಗೆ ಹೀಗೆ ಹೇಳಿದರು, ನನ್ನ ಮಗನಿಗೆ ಡ್ರೈವಿಂಗ್ ತರಬೇತಿಯನ್ನು ಕಲಿಸಿಕೊಟ್ಟಿದ್ದೇನೆ,, ನಾನು ಕಾರಿನಲ್ಲಿ ಅವನ ಪಕ್ಕದಲ್ಲಿ ಕುಳಿತಾಗ ಕಾರನ್ನು ಡ್ರೈವ್ ಮಾಡು ಎಂದರೆ ಅವನು ಭಯಪಡುತ್ತಾನೆ, ಒಂದು ದಿನವೂ ಕೂಡ ಸ್ವಯಂ ಪ್ರೇರಿತವಾಗಿ ಅವನು ಡ್ರೈವನ್ನೇ ಮಾಡಿಲ್ಲ, ನಾನು ಒತ್ತಾಯಪೂರ್ವಕವಾಗಿ ಹೇಳಿದ್ದರೂ ಸಹ ಮಾಡುತ್ತಿರಲಿಲ್ಲ, ಒಮ್ಮೆ ನಾನು ಯೋಚಿಸಿ ಒಂದು ತೀರ್ಮಾನಕ್ಕೆ ಬಂದು ಡ್ರೈವ್ ಮಾಡುತ್ತಿರುವ ಮಧ್ಯದಲ್ಲಿ ಸಿಗ್ನಲ್ ನಲ್ಲಿ ಇಳಿದು ನಾಲ್ಕೈದು ನಿಮಿಷದ ನಂತರ ಆತನಿಗೆ ಫೋನ್ ಮಾಡಿದೆ, ನಾನು ಅನ್ಯ ಕಾರ್ಯ ನಿಮಿತ್ತ ತುರ್ತಾಗಿ ಬೇರೆ ಕಡೆ ಹೊರಡುತ್ತಿದ್ದೇನೆ, ನೀನು ಕಾರನ್ನು ಮನೆಗೆ ಡ್ರೈವ್ ಮಾಡಿಕೊಂಡು ಹೋಗು ಎಂದು ಹೇಳಿ ಕರೆ ಕಟ್ ಮಾಡಿದೆ. ಅರ್ಧ ಗಂಟೆ ಬಿಟ್ಟುಮನೆಗೆಹೋದೆ,ಆಗಅವನುಕಾರನ್ನು ತಂದು ಮನೆಯ ಹತ್ತಿರದ ಪಾರ್ಕಿಂಗ್ ನಲ್ಲಿ ನಿಲ್ಲಿಸಿದ್ದ, ಆಗ ನಾನು ಅವನಿಗೆ ಕೇಳಿದೆ, ನಾನು ಕಾರನ್ನು ಡ್ರೈವ್ ಮಾಡು ಎಂದು ಹೇಳಿದಾಗಲೆಲ್ಲ ನೀನು ಮಾಡುತ್ತಿರಲಿಲ್ಲ ಈಗ ಇದು ಹೇಗೆ ಸಾಧ್ಯವಾಯಿತು? ಎಂದು,.. ನೀವು ನನ್ನ ಜೊತೆಯಲ್ಲಿ ಇರುತ್ತಿದ್ದಾಗ ನನಗೆ ಭಯವಾಗುತ್ತಿತ್ತು ಡ್ರೈವ್ ಮಾಡಲು ಆತ್ಮವಿಶ್ವಾಸವಿರಲಿಲ್ಲ, ಅದಕ್ಕಿಂತ ಹೆಚ್ಚಾಗಿ ನೀವಿದ್ದೀರಲ್ಲ,, ನೀವೇ ಓಡಿಸುತ್ತೀರಿ,, ಹಾಗಾಗಿ ನಾನು ಡ್ರೈವ್ ಮಾಡಲು ಮುಂದೆ ಬರುತ್ತಿರಲಿಲ್ಲ,,

ಈ ವಿಚಾರವನ್ನು ಸೂಕ್ಷ್ಮವಾಗಿ ಆಲೋಚಿಸಿದಾಗ ನಮಗೆ ಜೊತೆಯಲ್ಲಿ ಯಾರಾದರೂಸಪೋರ್ಟ್ಮಾಡುವವರು ಇದ್ದಾಗ ಅವರೇ ಮಾಡುತ್ತಾರೆ, ನಾನೇಕೆ ಮಾಡಬೇಕು ಎಂಬ ಭಾವ. ಯಾರೂ ಇಲ್ಲದಿದ್ದಾಗ ಸಾಮರ್ಥ್ಯದ ಭಾವ ಪುಟಿದೇಳುವುದು. ಹಾಗಾಗಿ ನಾವು ನಮ್ಮ ಮಕ್ಕಳನ್ನು ಅವರ ಕಾಲ ಮೇಲೆ ನಿಂತು ಬೆಳೆಯುವುದನ್ನು ಪ್ರೋತ್ಸಾಹಿಸಬೇಕೇ ಹೊರತು, ಸದಾ ನಾನು ನಿನ್ನ ಜೊತೆ ಇರುತ್ತೇನೆ ಎಂಬ ಭಾವನೆಯನ್ನು ಅವರಿಗೆ ಮೂಡಿಸುವುದರ ಬದಲು ಅವರನ್ನು ಸಮಾಜದಲ್ಲಿ ಇಂಡಿಪೆಂಡೆಂಟಾಗಿ ಬೆಳೆಯುವುದನ್ನು ಕಲಿಸಬೇಕಾಗಿರುವುದು ಅತಿ ಮುಖ್ಯ. ಮಕ್ಕಳಿಗೆ ನಾವು ಅವರ ಜೀವನ ರೂಪಿಸಿಕೊಳ್ಳಲು ನೆರವಾಗಬೇಕೇ ಹೊರತು ಅವರನ್ನು ಡಿಪೆಂಡೆಂಟ್ ಮಾಡುವುದಲ್ಲ,. ಅವರನ್ನು ಇಂಡಿಪೆಂಡೆಂಟ್ ಆಗಿ ಬೆಳೆಸುವುದರಲ್ಲಿ, ಅವರು ಸಮಾಜದಲ್ಲಿ ಅವರ ಕಾಲ ಮೇಲೆ ನಿಂತು ಅವರೇ ಜೀವನ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬ ಪೋಷಕರೂ ಪ್ರಯತ್ನಿ,ಶೀಲರಾಗಬೇಕಿದೆ.

ಇನ್ನೊಂದು ಬಹು ಮುಖ್ಯ ವಿಚಾರ ಏನೆಂದರೆ ಮಕ್ಕಳನ್ನು ಪ್ರೀತಿಸಿ ಬೆಳಸಬೇಕು ನಿಜ ಅದರ ಜೊತೆ ಶಿಕ್ಷಿಸಿ ಬೆಳೆಸುವುದು ಸಹ ಅಷ್ಟೇ ಮುಖ್ಯ ಎಂಬುದನ್ನು ಯಾರೂ ಮರೆಯಬಾರದು.

ನಾವೆಲ್ಲ ಶಾಲೆಗಳಲ್ಲಿ ಓದುತ್ತಿದ್ದ ದಿನಗಳಲ್ಲಿ ನಮಗೆ ಟೀಚರ್ಸ್ ಗಳು ತುಂಬಾ ಹೊಡೆಯುತ್ತಿದ್ದರು, ನಾವು ನಮ್ಮ ಅಪ್ಪ ಅಮ್ಮರಿಗೆ ಈ ವಿಚಾರವನ್ನು ಹೇಳಿದಾಗ ಅವರುಶಾಲೆಗೆಬಂದುಇನ್ನುನಾಲ್ಕುಇವರಿಗೆ ಭಾರಿಸಿ ಎಂದು ಹೇಳುತ್ತಿದ್ದರು, ಆಗ ನಮಗೆ ಅಪ್ಪ ಅಮ್ಮನ ಮೇಲೆ ತುಂಬಾ ಕೋಪವೂ ಬರುತ್ತಿತ್ತು,. ಈಗ ನಮಗೆ ಅರ್ಥವಾಗುತ್ತದೆ. ಅಪ್ಪ ಅಮ್ಮ ಅವರು ಹೀಗೆ ಹೇಳುತ್ತಿದ್ದದ್ದು ಸರಿ ಎಂದು. ಶಿಕ್ಷಕರು ನಮಗೆ ಹೊಡೆದು ಬುದ್ಧಿ ಕಲಿಸಿದ್ದರಿಂದಲೇ ತಾನೇ ನಾವೆಲ್ಲರೂ ಒಳ್ಳೆಯ ರೀತಿಯಲ್ಲಿ ಸುಶಿಕ್ಷಿತರಾಗಿ ಜೀವನ ರೂಪಿಸಿಕೊಂಡಿರುವುದು..!

ಕೆಲವು ತಂದೆ ತಾಯಂದಿರು ಮಕ್ಕಳಿಗೆ ಟೀಚರ್ಸ್ ಒಡೆದರೂ ಎಂಬ ಕಾರಣ-ಕ್ಕೆ ಟೀಚರ್ಸ್ ಮೇಲೆ ಹಲ್ಲೆ ನಡೆಸಲು ಮುಂದಾಗುತ್ತಾರೆ,, ಇದಕ್ಕೆ ಉದಾಹರಣೆ ಎಂಬಂತೆನಾನುಚಿಕ್ಕಂದಿನಲ್ಲಿಗಮನಿಸಿದಾಗ ಟೀಚರ್ ತಮ್ಮ ಮಗನಿಗೆ ಹೊಡೆದರೂ ಎಂಬ ಕಾರಣಕ್ಕೆ, ಒಬ್ಬಪೋಷಕ ಟೀಚರ್ಸ್ ಮೇಲೆಯೇ ಕೋಪೋದ್ರಿಕ್ತವಾಗಿ ಅತಿ-ರೇಕದ ಜಗಳವಾಡಿದರು, ಆಗ ಆ ಟೀಚರ್ ಆ ಹುಡುಗನ ಯಾವ ವರ್ತನೆಗೂ ತಲೆ ಕೆಡಿಸಿಕೊಳ್ಳಲಿಲ್ಲ, ಮುಂದೆ ಅವನು ಶಾಲೆ ಬಿಟ್ಟ, ಬೀಡಿ, ಸಿಗರೇಟ್ ಹಾಗೂ ಕುಡಿತದ ಚಟಕ್ಕೆ ದಾಸನಾದ, ನಂತರದ ದಿನಗಳಲ್ಲಿ ಕಳ್ಳತನದಲ್ಲೂ ಭಾಗಿಯಾದ ಜೈಲಿನ ಶಿಕ್ಷೆಯನ್ನೂ ಅನುಭವಿಸಿದ. ಜೈಲಿನಿಂದ ಬಿಡುಗಡೆಯಾಗಿಬಂದನಂತರಅವನತಂದೆ ತಾಯಿಗಳನ್ನೇ ಹಣಕ್ಕಾಗಿ ಪೀಡಿಸಿ ಹಿಂಸೆ ಕೊಡ ತೊಡಗಿದ,, ನಂತರದಲ್ಲಿ ಆತ ಒಬ್ಬ ಸಮಾಜದಲ್ಲಿ ಪರೋಡಿಯಾಗಿ ಅವನಿಗೂ ಹಾಗೂ ತಂದೆ ತಾಯಿಗಳಿಗೆ ಕೆಟ್ಟ ಹೆಸರು ತಂದು ಕುಡಿದು ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದ ಕೊನೆಗೆ ಮೃತಪಟ್ಟ. ಕೊನೆಯ ದಿನಗಳಲ್ಲಿ ಅವರಪ್ಪ ನನಗೆ ಹೀಗೆ ಹೇಳಿದರು. ನೀವೆಲ್ಲ ಉತ್ತಮರಾದಿರಿ, ನನ್ನ ಮಗ ಹಾಳಾಗಿ ಹೋದ ಎಂದು.. ಆಗ ನಾನು ಅವರಿಗೆ ಹೀಗೆಂದೇ ಶಾಲೆಯಲ್ಲಿ ಮಾಸ್ಟರ್ ಹೊಡೆಯುತ್ತಿದ್ದಾಗ ನೀವು ಮಾಡಿದ ಕೆಲಸ ನಿಮಗೆ ಅರಿವಿದೆಯೇ..? ಎಂದೆ. ಆಗ ಅವರು ಅರೆಕ್ಷಣ ಯಾವುದೇ ಉತ್ತರವಿಲ್ಲದೆ ಮೂಕ ವಿಸ್ಮಿತರಾದರು.

ಹಾಗಾಗಿ ಮಕ್ಕಳಿಗೆ ಪ್ರೀತಿ ಕೊಡುವ ಮೂಲಕ ಶಿಕ್ಷಿಸುವ ಭಯವನ್ನೂ ಅವರಲ್ಲಿ ಮೂಡಿಸಿ, ಸಂಸ್ಕಾರಯುಕ್ತ ಚಾರಿತ್ರ್ಯ ನಿರ್ಮಾಣ ಹಾಗೂ ನೈತಿಕ ಶಿಕ್ಷಣದ ವಿಚಾರದಲ್ಲೂ ಮಕ್ಕಳು ಭಾಗಿಯಾಗುವಂತೆ ನೋಡಿಕೊಳ್ಳುವುದು, ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕಿದೆ,.! ಈ ದಿಸೆಯಲ್ಲಿ ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ಬೆಳೆಸುವುದರ ಜೊತೆಗೆ ಸುಶಿಕ್ಷಿತ ಹಾಗೂ ಉತ್ತಮ ಸಮಾಜವನ್ನು ನಿರ್ಮಿಸಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಪೋಷಕರ ಮೇಲಿದೆ ಎಂಬುದನ್ನು ಯಾರೂ ಮರೆಯಬಾರದು.

* * *



**ಡಾ. ಸತ್ಯಮೂರ್ತಿ ಗೂಗಿ**
**ಚಿಂತಕರು, ಬೆಂಗಳೂರು**

## ಚಡಚಣದಲ್ಲಿ ಎಸ್‌ಬಿಐ ಬ್ಯಾಂಕ್ ದರೋಡೆ: ಕೋಟಿ ನಗದು, 13 ಕೆಜಿ ಚಿನ್ನಾಭರಣ ದೋಚಿದ ಶಂಕೆ

**ವಿಜಯಪುರ :** ಮುಸುಕುಧಾರಿ ದರೋಡೆಕೋರರ ಗುಂಪೊಂದು ಜಿಲ್ಲೆಯ ಚಡಚಣ ಪಟ್ಟಣದ ಎಸ್ ಬಿ ಐ ಬ್ಯಾಂಕಿಗೆ ಮಂಗಳವಾರ ಸಂಜೆ 5-30 ಗಂಟೆ ಸುಮಾರಿಗೆ ನುಗ್ಗಿ ಸುಮಾರು ಕೋಟಿ ನಗದು,13 ಕೆಜಿ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದೆ.

ಐದಕ್ಕೂ ಹೆಚ್ಚು ಮುಸುಕುಧಾರಿ ದರೋಡೆಕೋರರಿಂದ

ಈ ಕೃತ್ಯ ನಡೆದಿದ್ದು, ಮಿಲಿಟರಿ ಮಾದರಿ ಬಟ್ಟೆಯಲ್ಲಿ ಬಂದು ಕೈಯಲ್ಲಿ ಕಂಟ್ರಿ ಪಿಸ್ತೂಲ್ ಹಾಗೂ ಮಾರಕಾಸ್ತ್ರಗಳನ್ನು ತೋರಿಸಿ ಎಸ್ ಬಿ ಐ ಬ್ಯಾಂಕ್ ನಲ್ಲಿನ ಮ್ಯಾನೇಜರ್, ಕ್ಯಾಶಿಯರ್ ಹಾಗೂ ಇತರೆ ಸಿಬ್ಬಂದಿಗಳಿಗೆ ಹೆದರಿಸಿ ಕೈಕಾಲು ಕಟ್ಟಿ ಕೂಡಿ ಹಾಕಿ ದರೋಡೆ ನಡೆಸಲಾಗಿದೆ.

ಬ್ಯಾಂಕಿನಲ್ಲಿದ್ದ ಕೋಟಿ ಹಣ, 13 ಕೆಜಿ ಚಿನ್ನಾಭರಣ ದೋಚಿರುವ ಬಗ್ಗೆ ಪ್ರಾಥಮಿಕ ವರದಿಯಿಂದ ತಿಳಿದು ಬಂದಿದೆ. ಹೆಚ್ಚಿನ ಮಾಹಿತಿ ಪೊಲೀಸ್ ತನಿಖೆಯಿಂದ ಗೊತ್ತಾಗಬೇಕಾಗಿದೆ. ಸುದ್ದಿ ಕೇಳಿದ ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಹಾಗೂ ಇತರ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಬ್ಯಾಂಕ್ ದರೋಡೆ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ ಬ್ಯಾಂಕ್ ಮುಂದೆ ಸ್ಥಳೀಯರು ಅಧಿಕ ಸಂಖ್ಯೆಯಲ್ಲಿ ಜಮಾಯಿಸಿದರು.

ಪೊಲೀಸರು ತನಿಖೆ ಕಾರ್ಯ ಮುಂದುವರಿಸಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಬಸವನಬಾಗೇವಾಡಿ ತಾಲೂಕಿನ ಮನಗೂಳಿಯಲ್ಲಿ ನಡೆದ ಬ್ಯಾಂಕ್ ದರೋಡೆ ಜನರ ಮನಸ್ಸಿನಿಂದ ಇನ್ನೂ ಮಾಸದಿರುವಾಗಲೇ ಜಿಲ್ಲೆಯಲ್ಲಿ ಮತ್ತೊಂದು ಬ್ಯಾಂಕ್ ಪ್ರಕರಣ ನಡೆದಿರುವುದು ಜನರಲ್ಲಿ ಆತಂಕ ಮೂಡಿಸಿದೆ.

## ಚಿಕ್ಕಲಕಿ ಬಸ್ ಸೇವೆಗೆ ಚಾಲನೆ



**ವಿಜಯಪುರ :** ನಗರದಿಂದ ಚಿಕ್ಕಲಕಿ ಕ್ರಾಸ್ ವರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹೊಸದಾಗಿ ಎರಡು ಗ್ರಾಮೀಣ ಸಾರಿಗೆ ಬಸ್ ಸಂಚಾರಕ್ಕೆ ಇಂದು ಮಂಗಳವಾರ ಯಕ್ಕುಂಡಿ ಗ್ರಾಮದಲ್ಲಿ ಚಾಲನೆ ನೀಡಲಾಯಿತು.

ಗ್ರಾಮದಲ್ಲಿನಡೆದಕಾರ್ಯಕ್ರಮದಲ್ಲಿಸಿಂಗರಿಸಲಾಗಿದ್ದ ಎರಡು ಬಸ್ಸುಗಳ ಸಂಚಾರಕ್ಕೆ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಮಲ್ಲು ದಳವಾಯಿ ಮತ್ತು ಬ್ಲಾಕ್ ಕಾಂಗ್ರೆಸ್ ಈರಗೊಂಡ ಬಿರಾದಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲು ದಳವಾಯಿ, ಸಚಿವ ಎಂ. ಬಿ. ಪಾಟೀಲ ಅವರ ಸೂಚನೆಯಂತೆ ಈ ಗ್ರಾಮೀಣ ಸಾರಿಗೆ ನೂತನ ಬಸ್ಸುಗಳ ಸೇವೆ ಪ್ರಾರಂಭವಾಗಿದೆ. ಇದರಿಂದ ಈ ಮಾರ್ಗದಲ್ಲಿ ಬರುವ ಚಿಕ್ಕಲಕಿ ಕ್ರಾಸ್, ಅರ್ಜುಣಗಿ, ಯಕ್ಕುಂಡಿ, ಬಬಲೇಶ್ವರ, ಸಾರವಾಡ, ವಿಜಯಪುರ ಹಾಗೂ ಸುತ್ತಮುತ್ತಲಿನ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಸಚಿವರಿಗೆ ಹಾಗೂ ಸಾರಿಗೆ ಇಲಾಖೆಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಈರನಗೌಡ ಬಿರಾದಾರ ಮಾತನಾಡಿ, ಈ ಬಸ್ಸುಗಳ ಸಂಚಾರ ಎಲ್ಲರಿಗೂ ಸಂತಸ ತಂದಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಲಾಲಸಾಬ ಜಮಾದಾರ, ಗ್ರಾ ಪಂ ಅಧ್ಯಕ್ಷ ರಫೀಕ ಸೋನಾರ, ಸದಸ್ಯರಾದ ಗುರು ಜೈನಾಪೂರ, ಸಿದರಾಯ ಬಿರಾದಾರ, ಬಸು ಕಾಲಿಬಾಗ, ಗೌಡಪ್ಪ ಬಿರಾದಾರ, ಮುಖಂಡರಾದ ಬಾಬುಗೌಡ ಪಾಟೀಲ, ಚನ್ನಪ್ಪ ಕೊಪ್ಪದ, ಶೇಖಪ್ಪ ಕೊಪ್ಪದ, ಪ್ರಭುಗೌಡ ಪಾಟೀಲ, ಅಶ್ಪಾಕ ಜಾಗೀರದಾರ, ಜುಬ್ರಾಯಿಲ್ ಮೊಕಾಲೆ, ರವಿ ಕಾಂಬಳೆ, ನಾಗರಾಜ ಕುಲಕರ್ಣಿ, ಮುದಕನಗೌಡ ಪಾಟೀಲ, ಗುರುಬಸಪ್ಪ ತೆವರಟ್ಟಿ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಕ ನಾರಾಯಣಪ್ಪ ಕುರುಬರ, ಡಿಟಿಓ ಎಂ. ಎಸ್. ಹಿರೇಮಠ, ಡಿಪೋ-1ರ ಮ್ಯಾನೇಜರ್ ಎಸ್. ಎ. ಬಿರಾದಾರ, ಎ. ಟಿ. ಎಂ ಜೆ. ಕೆ. ಹುಗ್ಗೆನವರ ಸೇರಿದಂತೆ ಯಕ್ಕುಂಡಿ, ಹೊಕ್ಕುಂಡಿ, ಕಾತ್ರಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಉಪಸ್ಥಿತರಿದ್ದರು.

## ಮುಳವಾಡ ಕೈಗಾರಿಕೆ ವಸಾಹತು ಪ್ರದೇಶದಲ್ಲಿ ಬಸವಣ್ಣನ ಮೂರ್ತಿ ಪ್ರತಿಷ್ಠಾಪನೆ

**ವಿಜಯಪುರ :** ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮುಳವಾಡ ಹತ್ತಿರ ಇರುವ ಕೈಗಾರಿಕಾ ಪ್ರದೇಶದಲ್ಲಿ ವಿಶ್ವಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನಾ ಸಮಾರಂಭ ಹಾಗೂ ಧರ್ಮಸಭೆ ಮತ್ತು ವಿವಿಧ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.



ಭವ್ಯ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿಯ ಮುಖಾಂತರ ಕೈಗಾರಿಕಾ ಪ್ರದೇಶ ಮುಖ್ಯ ರಸ್ತೆಯಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರ ಹಾಗೂ ವಚನಗಳನ್ನು ತಲೆಯ ಮೇಲೆ ಹೊತ್ತ ಮಹಿಳೆಯರು ಆಗಮಿಸಿದರು. ಜೋಡಿ ಎತ್ತಿನ ಗಾಡಿ ಬಂಡೆಗಳು ಹಾಗೂ ಶಬ್ದ ಚಿತ್ರದೊಂದಿಗೆ ಕರಡಿ ? ಸಂಬಳ (ಶಬ್ದ) ಮಜಲದ ಸಪ್ಪಳದೊಂದಿಗೆ ಶ್ರೀ ಬಸವೇಶ್ವರ ಮುತ್ತಳಿಯ ಹತ್ತಿರ ಭಕ್ತರೂ ಆಗಮಿಸಿ ಶೋಭೆ ತಂದರು.

ಶ್ರೀ ಜಗಜ್ಯೋತಿ ಬಸವೇಶ್ವರ ಮುತ್ತಳಿ ಹಾಗೂ ನಾಗಪ್ಪ ಬಿದರಿ ಅವರ ಮಾಲಿಕತ್ವದಲ್ಲಿ ಇರುವ ಬಿದರಿ ಫ್ಯಾಬ್ರಿಕೇಷನ್ ಮತ್ತು ಇಂಜಿನಿಯರಿಂಗ್ ವರ್ಕ್ಸ್ ನೂತನ ಕಟ್ಟಡ ಮತ್ತು ಈಗಲ್ ಡಿಟೆಕ್ಟಿವ್ ಪೋರ್ಸ್ ಮುಳವಾಡ ಹೊಸ ಶಾಖೆ ಪ್ರಾರಂಭೋತ್ಸವದ ಉದ್ಘಾಟನೆಯನ್ನು ಹುಬ್ಬಳ್ಳಿಯ ಮೂರ ಸಾವಿರ ಮಠದ ಶ್ರೀ ಗುರುಸಿದ್ಧ ರಾಜಯೋಗಿಂದ್ರ ಮಹಾ ಸ್ವಾಮೀಜಿ ಹಾಗೂ ವಿರೋಧ ಪಕ್ಷದ ಉಪಾಧ್ಯಕ್ಷ ಅರವಿಂದ ಬೆಲ್ಲದ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮತ್ತು ವಿವಿಧ ಪೂಜ್ಯರ ನೇತೃತ್ವದಲ್ಲಿ ನಡೆಯಿತು.

ಧರ್ಮಸಭೆಯ ದಿವ್ಯ ಸಾನ್ನಿಧ್ಯ ವಹಿಸಿದ ಹುಬ್ಬಳ್ಳಿಯ ಮೂರು ಸಾವಿರ ಮಠದ ಡಾ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಅವರು ಕಾಯಕದಲ್ಲಿ ನಿಷ್ಠೆ, ಸಜ್ಜನಿಕೆ, ಸರಳತೆ, ಸೌಮ್ಯಸ್ವಭಾವ ಹೊಂದಿಕೊಂಡು ಕಾಯಕವನ್ನು ಮಾಡಿದ ಯಾವುದೇ ಕಾಯಕವಾಗಲಿ ಯಶಸ್ವಿಯಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಮುಳವಾಡ ಹಿರೇಮಠದ ಶ್ರೀ ಸಿದ್ದಲಿಂಗ ಶ್ರೀ ಶಿವಾಚಾರ್ಯ ಮಹಾ ಸ್ವಾಮೀಜಿ ಶ್ರೀ ಬಸವೇಶ್ವರ ಈ ಭಾಗದ ಜನತೆಗೆ ದಿನನಿತ್ಯ ದರ್ಶನ ಕೊಡುವ ಹಾಗೆ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎಂದು ಬಿದರಿ ಕುಟುಂಬದವರಿಗೆ ಶುಭ ಹಾರೈಸಿದರು.

ಕಾಖಂಡಕಿಯ ಗುರುದೇವ ಆಶ್ರಮದ ಶ್ರೀ ಶಿವಯೋಗೀಶ್ವರ ಸ್ವಾಮೀಜಿ. ಕಷ್ಟದಲ್ಲಿ ಜೀವನ ನಡೆಸುತ್ತಿರುವ ನೊಂದ ಮನಗಳಿಗೆ ನಂದಾದೀಪವಾಗಿ ಕೆಲಸ ಮಾಡಿದರೆ ದೇವರು ಒಳ್ಳೆಯ ಕೆಲಸ ಮಾಡಿದವರನ್ನು ಕೈ ಬಿಡುವುದಿಲ್ಲ ಎಂದು ಆಶೀರ್ವಾದ ನುಡಿಗಳನ್ನು ಹೇಳಿದರು.

ಧಾರವಾಡದ ಅಕ್ಕಮಹಾದೇವಿ ಅನುಭವ ಪೀಠದ ಅಧ್ಯಕ್ಷೆ ಶ್ರೀ ಮಾತೆ ಜ್ಞಾನೇಶ್ವರಿ ಅಮ್ಮನವರು ಮುತ್ತಳಗಿ ಪೂಜಾ ವಿಧಿ ವಿಧಾನಗಳನ್ನು ಅವರ ಬಳಗದೊಂದಿಗೆ ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹಿರಿಯ ಸಾಹಿತಿ ಡಾ. ವೀರಣ್ಣ ರಾಜೂರ ಅವರು ಬಸವಣ್ಣನ ನಾಡಿನಲ್ಲಿ ಶ್ರೀ ಬಸವೇಶ್ವರರ ಮೂರ್ತಿ ಅನಾವರಣಗೊಂಡಿರುವುದು ಸಂತೋಷ ತಂದಿದೆ. ದಿನನಿತ್ಯ ಅವರ ದರ್ಶನ ಪಡೆದು ಶರಣರು ಹಾಕಿಕೊಟ್ಟ ಮಾರ್ಗದರ್ಶನ ನಡೆದರೆ ಬದುಕು ಬಂಗಾರವಾಗುತ್ತದೆ ಎಂದು ಅಧ್ಯಕ್ಷ ನುಡಿಗಳನ್ನು ಹೇಳಿದರು.

ವಿರೋಧ ಪಕ್ಷದ ಉಪಾಧ್ಯಕ್ಷ ಹಾಗೂ ಧಾರವಾಡದ ಶಾಸಕ ಅರವಿಂದ ಬೆಲ್ಲದ ಅವರು ಬಿದರಿ ಕುಟುಂಬದವರು ಧಾರವಾಡದಲ್ಲಿಯೂ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿರುತ್ತಾರೆ.ಸುಮಾರು ಮೂರು ದಶಕಗಳವರೆಗೆ ನಮ್ಮ ತಂದೆಯವರ ಹಿಡಿದು ಅವರು ಮಾಡಿದ ಕಾರ್ಯಕ್ಕೆ ದೇವರು ಒಲಿದಿದ್ದಾನೆ ಎಂದು ಹೇಳಿದರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ "ಮಡ್ಡಿ ಬಂಗಾರ ಕಡ್ಡಿ " ಎಂದು ಹಿರಿಯರು ಹೇಳಿದ ಹಾಗೆ ಈ ಭಾಗದಲ್ಲಿ ಕೈಗಾರಿಕಾ ಕ್ಷೇತ್ರವು ಬರುತ್ತಿರುವುದು ಹಲವಾರು ಯುವಕರಿಗೆ ಹಾಗೂ ದುಡಿಯುವ ಕೈಗಳಿಗೆ ಕೆಲಸ ಪ್ರಾರಂಭವಾಗಲಿವೆ ಎಂದು ಹೇಳಿದರು.

ಕಾಖಂಡಕಿಯ ಹಿರಿಯರಾದ ಈಶ್ವರಪ್ಪ ಕೋರಿ, ಮುಳವಾಡ ಪಿ ಕೆ.ಪಿ.ಎಸ್ ಅಧ್ಯಕ್ಷ ರವಿ ಕೆಂಗನಾಳ. ಧಾರವಾಡ ಹುಬ್ಬಳ್ಳಿ ಮಾಜಿ ಮಹಾಪೌರ ಶಿವು ಹಿರೇಮಠ. ಮಾಲಿಂಗೆಗೌಡ ಮುದ್ದನಗಟ್ಟಿ. ಬಾಳು ಜನಕೇಕರ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಧಾರವಾಡ, ಬೆಂಗಳೂರು, ಹುಬ್ಬಳ್ಳಿ, ಮುಳವಾಡ, ಕಾಖಂಡಕಿ, ಕಾರಜೋಳ, ಮಲಘಾಣ, ಕಲಬುರ್ಕಿ, ಕೊಲ್ಹಾರ, ಉಪ್ಪಲದಿನ್ನಿ, ರೋಣಿಹಾಳ ಮುಂತಾದ ಸುತ್ತಲಿನ ಗ್ರಾಮಸ್ಥರು ಹಾಗೂ ಬಿದರಿ ಪರಿವಾರದವರು ಮತ್ತು ಶ್ರೀಗುರುಬಸಪ್ಪ ಶಿಕ್ಷಣ ಸಂಸ್ಥೆ (ದಿ) ತಕ್ಷಶಿಲ ಅಂಗ್ಲ ಮಾಧ್ಯಮ ಪ್ರೌಢಶಾಲೆ,ತಾರಿಹಾಳ. ಶಿಕ್ಷಕ ವಿದ್ಯಾರ್ಥಿಗಳ ಮುದ್ದು ಮಕ್ಕಳಿಂದ ವಿವಿಧ ಸಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಅಶೋಕ ತಿಮಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿದ್ದನ ಕೂಸರೆಡ್ಡಿ ನಿರೂಪಿಸಿದರು. ಚಂದ್ರಶೇಖರ ಜಗಜಿನ್ನಿ ವಂದಿಸಿದರು.

## ಪರಿಸರ ಉಳಿದರೆ ಮಾತ್ರ ಮನುಷ್ಯ ಕುಲ ಉಳಿಯಲಿದೆ : ನರೇಶಾನಂದ ಸ್ವಾಮಿಜಿ

**ವಿಜಯಪುರ :** ಎಲ್ಲರೂ ಆಧುನಿಕ ಜಗತ್ತಿನ ಸುಖ ಸಂಪತ್ತಿಗೆ ಬೆನ್ನು ಹತ್ತಿ ನಿಜವಾದ ಆರೋಗ್ಯಕರ ಬದುಕನ್ನು ನಡೆಸುವುದನ್ನು ಮರೆಯುತ್ತಿದ್ದೇವೆ. ಪರಿಸರ ಉಳಿದರೆ ಮಾತ್ರ ಮನುಷ್ಯ ಕುಲ ಉಳಿಯಲಿದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಮನೆಯ ಅಂಗಳದಲ್ಲಿ, ತಮ್ಮ ಓಣಿಯ ಉದ್ಯಾನವನಗಳಲ್ಲಿ ಹಾಗೂ ತಮ್ಮ ತಮ್ಮ ಜಮೀನುಗಳಲ್ಲಿ ಸಾಧ್ಯವಾದಷ್ಟು ಮರಗಳನ್ನು ಹಚ್ಚಬೇಕು ಎಂದು ನಗರದ ಹೊರ ವಲಯದ ರಾಮಕೃಷ್ಣ ವಿವೇಕಾನಂದ ಆಶ್ರಮದ ಆವರಣದಲ್ಲಿ ಟೆಕ್‌ಸಿರಿ ಹಾಗೂ ನನ್ನಗಿಡ ನನ್ನ ಭೂಮಿ ಸಂಘಟನೆಯ ಸಹಯೋಗದಲ್ಲಿ ಆಯೋಜಿಸುವ ಸಸಿ ನೆಡುವ ಕಾರ್ಯಕ್ರಮದಲ್ಲಿ ನರೇಶಾನಂದ ಸ್ವಾಮಿಜಿ ಅವರು ಹೇಳಿದರು.

ಟೆಕ್‌ಸಿರಿಯಸಂಸ್ಥಾಪಕಮುತ್ತುಸರಶೆಟ್ಟಿಅವರುಮಾತನಾಡಿ, ಯಾವುದೇ ಸಂಸ್ಥೆಯ ಶ್ರೇಯಸ್ಸು ಅದರ ಉದ್ಯೋಗಿಗಳ ಮೇಲೆಯೇ ಅವಲಂಬಿತವಾಗಿದೆ. ಟೆಕ್‌ಸಿರಿ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ ಕೃತಜ್ಞತೆಯ ಸಂಕೇತವಾಗಿ ಪ್ರತಿಯೊಬ್ಬ ಉದ್ಯೋಗಿಯ ಹೆಸರಲ್ಲಿ ಪ್ರತಿ ತಿಂಗಳು ಒಂದು ಗಿಡದಂತೆ ನೆಡಲು ನಿರ್ಧಸಿದ್ದೇವೆ. ಹೇಗೆ ಮರಗಳು ಪ್ರಕೃತಿಗೆ ಜೀವ ನೆರಳು ಮತ್ತು ಶಕ್ತಿ ನೀಡುತ್ತದೆಯೋ ಹಾಗೆ ನಮ್ಮ ಉದ್ಯೋಗಿಗಳು ನಮ್ಮ ಟೆಕ್‌ಸಿರಿಗೆ ಶಕ್ತಿ ಸಮರ್ಪಣೆ ಮತ್ತು ಬೆಳವಣಿಗೆ ನೀಡುತ್ತಾರೆ. ನಮ್ಮ ಜನರಿಗೆ ಹಾಗೂ ನಮ್ಮ ಭೂಮಿಗೆ ಹೃದಯಪೂರ್ವಕ ಧನ್ಯವಾದ ಸಲ್ಲಿಸುವ ಪ್ರಯತ್ನ ನಮ್ಮದು ಎಂದರು.




ನನ್ನಗಿಡನನ್ನಭೂಮಿಯಸಂಚಾಲಕಬಸವರಾಜಬೈಚಬಾಳ ಅವರು ಮಾತನಾಡಿ, ಈ ದೇಶದ ಎಲ್ಲಾ ಕಂಪನಿಗಳ ಆಡಳಿತ ಮಂಡಳಿಗಳು, ಇದೇ ತರಹ ಉದ್ಯೋಗಿಗಳು ಹಾಗೂ ಭೂಮಂಡಲವನ್ನು ಮುಂದಿಟ್ಟುಕೊಂಡು ಸಸಿ ನೆಡುವ ಕೆಲಸವನ್ನು ಮಾಡಬೇಕು.

ನಮ್ಮ ಜಿಲ್ಲೆಯಲ್ಲಿ ಟೆಕ್‌ಸಿರಿ ಕಂಪನಿ ಉಳಿದೆಲ್ಲ ಕಂಪನಿಗಳಿಗೆ ಮಾದರಿ ಕೆಲಸ ಮಾಡುತ್ತಿದ್ದೇವೆ. ನಾವೆಲ್ಲರೂ ಬದುಕಬೇಕಾದರೆ ಶುದ್ಧ ಗಾಳಿ, ಅತೀ ಅವಶ್ಯಕ. ಆ ನಿಟ್ಟಿನಲ್ಲಿ ಇಂತಹ ಕೆಲಸಗಳು ಎಲ್ಲರಿಂದಲೂ ಆಗಬೇಕು.

ಇದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಈ ವೇಳೆ ಟೆಕ್‌ಸಿರಿಯ ಕಂಪನಿಯ ಉದ್ಯೋಗಿಗಳಾದ ವಿಜಯಕುಮಾರ ಅರಳಿಮಠ, ವಿಶ್ವನಾಥ ಸಿದ್ಲಿಂಗಪ್ಪನವರ, ಸಂಗಮೇಶ ತಳವಾಡೆ, ವಾಸವಿ ಘೋರ್ಪಡೆ, ಚಂದನ ಮಾರಪುರ, ಸೌರಭ ಬಿರಾದಾರ, ಬಸವರಾಜ ಹಲ್ಯಾಳ, ವಿರೇಶ ಬಿರಾದಾರ, ಗಂಗಾಬಾಯಿ ಕೊಕಟನೂರ, ವೀನಾ ಮೂಲಿಮನಿ, ಶ್ರೀಲತಾ ಇದ್ದರು.

ಈ ಸಂದರ್ಭದಲ್ಲಿ ಅರಣ್ಯ ಅಧಿಕಾರಿಗಳಾದ ಸಂತೋಷ ಅಜೂರ,

ಮಂಜುನಾಥ ಆಸಂಗಿ, ವಾರ್ಡ್ ನ. 35 ರ ಮಹಾನಗರ ಪಾಲಿಕೆ ಸದಸ್ಯರಾದ ರಾಜು ಕುರಿ, ಚಿದಾನಂದ ಔರಂಗಬಾದ, ವಿರೇಶ ಮುದಕಾಮಠ, ರಾಜಕುಮಾರ ಸಗಾಯಿ, ಆನಂದ ಅಥಣಿ,

ಸಂಜು ಗುನ್ನಾಪುರ, ಶಿವಯೋಗಿ ವಾಲಿಕಾರ, ವಿಶಾಲ ಹಿರಾಸ್ಕರ್, ಅಮೀತ ಕ್ಷೀರಸಾಗರ, ದಿನೇಶ ಅಡಕಿ, ವಿಶಾಲ ಹೊರಾಸ್ಕರ್, ಅಮೀತ ಕ್ಷೀರಸಾಗರ ಸೇರಿದಂತೆ ಅನೇಕರು ಇದ್ದರು.

# ಬಿಎಲ್ ಡಿಇ ಎಸ್.ಎಸ್.ಎಂ ಔಷಧಿಯ್ಯಾಲಯದಲ್ಲಿ ದೃಷ್ಟಿಕೋನ ಕಂಕಣ ಕಾರ್ಯಕ್ರಮ

**ವಿಜಯಪುರ :** ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಎಸ್.ಎಂ ಔಷಧಿಯ ಮಹಾವಿದ್ಯಾಲಯ ಮತ್ತು ಸಂಶೋಧನೆ ಕೇಂದ್ರದಲ್ಲಿ ನೂತನ ವಿದ್ಯಾರ್ಥಿಗಳಿಗಾಗಿ
ದೃಷ್ಟಿಕೋನ ಕಾರ್ಯಕ್ರಮ ಕಂಕಣ– 2025 ಶನಿವಾರ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬೆಳಗಾವಿಯ ಐ.ಸಿ.ಎಂ.ಆರ್ಎನ್.ಐ.ಟಿ.ಎಂನಡಾ.ಬನಪ್ಪಉಂಗೆರ ಮಾತನಾಡಿ, ಫಾರ್ಮಾ ಪದವೀಧರರಿಗೆ ಭವಿಷ್ಯದಲ್ಲಿ ಹೊಸ ಔಷಧ ಅನ್ವೇಷಣೆ ಮತ್ತು ಸೂತ್ರೀಕರಣ ವಿನ್ಯಾಸ ಹಾಗೂ ಕ್ಲಿನಿಕಲ್ ಸಂಶೋಧನೆಯಲ್ಲಿ ವಿಪುಲ ಅವಕಾಶಗಳಿದ್ದು, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಬಿ. ಫಾರ್ಮ್ಸ್ ಸಂಯೋಜಕ ಡಾ. ಶ್ರೀಧರಕುಮಾರ ಬಿರಾದಾರ ಮತ್ತು ರವೀಂದ್ರಕುಮಾರ ರೇವಡಿಯುಗರ ಮಾತನಾಡಿ ಬಿ. ಫಾರ್ಮಾ ಮತ್ತು ಡಿ. ಫಾರ್ಮಾ ಕೋರ್ಸುಗಳ ಕುರಿತು ಮಾಹಿತಿ ನೀಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನಶೆಟ್ಟಿ, ಡಾ. ವಿ. ಪಿ. ಪಾಟೀಲ, ಬಿ ಎಲ್ ಡಿ ಇ ಸಂಸ್ಥೆಯ ವಚನ ಪಿತಾಮಹ ಡಾ. ಪಿ. ಜಿ. ಹಳಕಟ್ಟಿ ಅಭಿಯಾಂತ್ರಿಕ ಮತ್ತು



ತಾಂತ್ರಿಕ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ
ಸಂತೋಷ ಚಪ್ಪರ, ಕಾನೂನು ಮಹಾವಿದ್ಯಾಲದ ಶಿಕ್ಷಕಿ ಸನಾ ಕೌಸರ ಅವರು ಮಾತನಾಡಿದರು.

ಡಾ. ಸಂತೋಷ ಕರಜಗಿ ಸ್ವಾಗತಿಸಿದರು. ಅಶ್ವಿನಿ ಮತ್ತು ಡಾ. ಸುಧಾ ಪಾಟೀಲ ನಿರೂಪಿಸಿದರು. ಸಂತೋಷ ಅವಸ್ಥಿ ವಂದಿಸಿದರು.

# ರೈತರೆಲ್ಲರೂ ಒಗ್ಗೂಡಬೇಕು, ರೈತ ಸಂಘಟನೆಗಳು ಪ್ರತಿ ಗ್ರಾಮಗಳಲ್ಲಿ ಆಗಬೇಕು: ಚೂನಪ್ಪ ಪೂಜೇರಿ ಕರೆ

**ವಿಜಯಪುರ :** ಈ ನಾಡಿನಲ್ಲಿ ರೈತರ ಹೆಸರಲ್ಲಿ ದಿನನಿತ್ಯ ಸುಲಿಗೆ ಮಾಡಲಾಗುತ್ತಿದೆ. ನಮ್ಮನಾಳುವ ಜನಪ್ರತಿನಿಧಿಗಳು ಕೂಡಾ ಚುನಾವಣಾ ಸಂದರ್ಭದಲ್ಲಿ ನಾವೂ ಕೂಡಾ ರೈತರ ಮಕ್ಕಳು ಎಂದು ಜಾತಿ, ಪಕ್ಷ ಎಂದು ಯಾಮಾರಿಸಿ ಹಣ, ಹೆಂಡ ಕೊಟ್ಟು ಆರಿಸಿ ಬಂದ್ದು, ತಾವು ಹೇಳಿರುವ ಎಲ್ಲಾ ಆಶ್ವಾಸನೆಗಳನ್ನು ಮರೆತು ಹಣ ಮಾಡುವುದರಲ್ಲಿ ತೊಡಗುತ್ತಾರೆ, ಆದ್ದರಿಂದ ರೈತರಿಗೆ ನಿಜಾವಾಗಲೂ ನ್ಯಾಯ ಸಿಗಬೇಕಾದರೆ ಎಲ್ಲಾ ರೈತರು ಒಗ್ಗೂಡಬೇಕು. ಹಾಗೆ ಈ ದೇಶದ ಪ್ರತಿ ಗ್ರಾಮಗಳಲ್ಲಿ ರೈತ ಸಂಘಟನೆಗಳಾಗಬೇಕು. ಎಲ್ಲಾ ಮಹಿಳೆಯರು, ಪುರುಷರು ಹಾಗೂ ಯುವಕರು ಪಕ್ಷಾತೀತವಾಗಿ,ಜಾತ್ಯಾತೀತವಾಗಿ ಸಂಘಟನೆ ಮಾಡಿದಾಗ ಮಾತ್ರ ರೈತರ ಉದ್ದಾರವಾಗಲಿದೆ ಎಂದು ಚೂನಪ್ಪ ಪೂಜೇರಿ ಮಾತನಾಡಿದರು

ಕರ್ನಾಟಕ ರಾಜ್ಯರೈತ ಸಂಘ ಹಾಗೂ ಹಸಿರು ಸೇನೆಯ ದೇವರ ಹಿಪ್ಪರಗಿ ತಾಲೂಕಿನ ಹಿಟ್ನಳ್ಳಿ ಗ್ರಾಮ ಘಟಕದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಳೆದ 30 ವರ್ಷಗಳಿಂದ ಕೃಷಿ ಚಟುವಟಿಕೆಗಳ ವೆಚ್ಚುಗಳು ಹತ್ತು



ಪಟ್ಟು ಹೆಚ್ಚುತ್ತಲಿವೆ.

ಆದರೆ ರೈತರು ಬೆಳೆದ ಎಲ್ಲಾ ಬೆಳೆಗಳಿಗೆ ಯೋಗ್ಯ ಬೆಲೆಗಳಿಲ್ಲದೇ ಮಾಡಿರುವ ಖರ್ಚು ಸಾಲದೇ ಸಾಲದ ಸುಳಿಯಿಂದ ಎದ್ದು ಬರದಾಗದೇ ಪ್ರತಿ ಅರ್ಧಗಂಟೆಗೆ ಒಬ್ಬ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ನಿಲ್ಲ ಬೇಕಾದರೆ ರೈತರೆಲ್ಲರೂ ಒಂದುಗೂಡಬೇಕು.

ಕೃಷಿಯ ಜೊತೆಗೆ ಉಪ ಕಸಬುಗಳನ್ನು ಮಾಡಿ ದಿನನಿತ್ಯ ಆದಾಯ ಬರುವ ಹಾಗೆ ಮಾಡಿಕೊಳ್ಳಬೇಕು.

ಅಂದಾಗ ರೈತರು ಸಾಲದಿಂದ ಮುಕ್ತರಾಗುತ್ತಾರೆ, ಅದಕ್ಕಾಗಿ ಯಾವಾಗಲೂ ರೈತ ಸಂಘ ನಿಮ್ಮ ಪರ ಹಗಲು ರಾತ್ರಿ ಕೆಲಸ ಮಾಡಲಿದೆ ಎಂದರು.

ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ. ಪ್ರಭುಗೌಡ ಪಾಟೀಲ ಅವರು ಮಾತನಾಡಿ, ಈದೇಶದಲ್ಲಿ ಪ್ರತಿಯೊಬ್ಬರು ತುತ್ತು ಅನ್ನ ತಿನ್ನುವ ಮುಂಚೆ ಅನ್ನದಾತನನ್ನು ನೆನೆಯಬೇಕು. ಈ ನಾಡಿನಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೇ ಬೆವರುಸುರಿಸಿಈದೇಶದಭದ್ರತೆಗೆ, ಅನ್ನವನ್ನು ಬೆಳೆಯುತ್ತಿರುವ ರೈತರನ್ನು ಪೂಜಿಸಬೇಕು.

ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಹೋಗಲಾಡಿಸಬೇಕಾದರೆ ಸಂಘಟಿತರಾಗಬೇಕು ಎಂದರು.

ದೇವರಹಿಪ್ಪರಗಿಯ ತಹಸೀಲ್ದಾರ ಪ್ರಕಾಶ ಸಿಂದಗಿ ಅವರು ಮಾತನಾಡಿ, ಈ ದೇಶದ ಬಹುತೇಕ ಶೇ. 70ರಷ್ಟು ಜನ ರೈತರಿದ್ದು, ದೇಶದ ಆರ್ಥಿಕತೆಯ ಮೂಲ ಬುನಾದಿ ರೈತರಾಗಿದ್ದಾರೆ. ಅಂತಹ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ರೈತರಿಗೆ ಅನ್ಯಾಯ ಆಗಬಾರದು ಎಂದರೆ ಈ ರೀತಿಯ ಸಂಘಗಳನ್ನು ಮಾಡಿ ಜಾಗೃತಿ ಕಾರ್ಯಕ್ರಮಗಳನ್ನು ಮೇಲಿಂದ ಮೇಲೆ ಮಾಡಬೇಕು.

ಜೊತೆಗೆ ನಮ್ಮ ಇಲಾಖೆಯಿಂದ ನಾವೂ ಕೂಡಾ ಸದಾ ರೈತರ ಪರವಾಗಿ ಸೇವೆ ಸಲ್ಲಿಸಲು ಸಿದ್ದರಿದ್ದೇವೆ ಎಂದರು.

ಈ ವೇಳೆ ದಿವ್ಯ ಸಾನ್ನಿಧ್ಯವನ್ನು ಮುಳಸಾವಳಗಿಯ ಸಿದ್ಧಾರೂಡ ಮಠದ ದಯಾನಂದ ಸ್ವಾಮಿಜಿ, ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಪಡಸಲಗಿ,


ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ, ರಾಜ್ಯ ಕಾರ್ಯಾಧ್ಯಕ್ಷ ರಾಜು ಪವಾರ, ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಮಹಿಳಾ ತಾಲೂಕಾ ಅಧ್ಯಕ್ಷೆ ಚನ್ನಮ್ಮ ಮೇತ್ರಿ ಮಾತನಾಡಿ, ರೈತರೆಲ್ಲರೂ ಹೆಚ್ಚು ಹೆಚ್ಚು ಕಾರ್ಯ ಪ್ರವೃತ್ತರಾಗಬೇಕು.

ಸಮಘಟಿತರಾಗಬೇಕು. ಜಾಗೃತಿ ಕಾರ್ಯಕ್ರಮ, ತರಬೇತಿ ಶಿಬಿರ ಮಾಡುತ್ತಾ ಹೊಸ ಹೊಸ ತಂತ್ರಜ್ಞಾನಗಳ ಮಾಹಿತಿ ಪಡೆದುಕೊಂಡು ಸರಕಾರದ ಎಲ್ಲಾ ಯೋಜನೆಗಳನ್ನು ರೈತರ ಮನೆಗೆ ತಲುಪಿಸಲು ರೈತ ಸಂಘಟನೆ ಅವಶ್ಯಕ ಎಂದರು.

ಈ ವೇಳೆ ಮುಖಂಡರಾದ ಚಂದ್ರಕಾಂತಪ್ಯಾಟಿ,ರಾಮನಗೌಡ ಪಾಟೀಲ, ದೇವರ ಹಿಪ್ಪರಗಿ ಅಧ್ಯಕ್ಷ ಈರಪ್ಪ ಕುಳೆಕುಮಟಗಿ, ಶಿವಾನಂದಯ್ಯ ಹಿರೇಮಠ, ಶಾನೂರ ನಂದರಗಿ, ಅನಮೇಶ ಜಮಖಂಡಿ, ಆತ್ಮಾನಂದ ಭೈರೋಡಗಿ, ಸಂಪತ್ ಜಮಾದಾರ, ಶಕೀರಾ ಹೆಬ್ಬಾಳ, ಸುನಂದಾ ಸೊನ್ನಳ್ಳಿ, ರಾಮಸಿಂಗ ರಜಪೂತ, ಬಸಗೊಂಡಪ್ಪ ತೇಲಿ, ಮಲ್ಲನಗೌಡ ಬಿರಾದಾರ, ಲಕ್ಕಪ್ಪ ಹೂಗಾರ, ಶಾಂತಯ್ಯ ಹಿರೇಮಠ, ಭೀಮನಗಡ ಬಿರಾದಾರ, ಮಲ್ಲಪ್ಪ ಸುಂಬಡ,

ಚಿದಾನಂದ ಮೋಪಗಾರ, ಬಸವರಾಜ ಜೋಗೂರ, ಸಿದ್ದಪ್ಪ ಪೂಜಾರಿ, ಮೈಬೂಬ ಪಟೇಲ, ಮಜಬ್ಬ ಗುಡ್ಡಳ್ಳಿ, ಬೀಬಿಜಾನ ಬಿರಾದಾರ ಸೇರಿದಂತೆ ಹಿಟ್ನಳ್ಳಿ ಗ್ರಾಮದ ಅನೇಕ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಸೇರಿದಂತೆ ಇತರರು ಇದ್ದರು.

# ಕಾಂಗ್ರೆಸ್ ಮೀನುಗಾರರ ಸಮಿತಿ ಸಭೆ




**ವಿಜಯಪುರ:** ಜಿಲ್ಲಾ ಕಾಂಗ್ರೆಸ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಕಾಂಗ್ರೆಸ್ ಮೀನುಗಾರರ ಸಮಿತಿ ಸಭೆ ಜರುಗಿತು.

ಕೆಪಿಸಿಸಿ ಮೀನುಗಾರರ ಸಮಿತಿ ಅಧ್ಯಕ್ಷ ಮಂಜುನಾಥ ಸುಣಗಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ಸಂಘಟನೆ ಮತ್ತಿತರರ ಮಹತ್ವದ ವಿಷಯಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮತ ಕಳ್ಳತನ ನಿಲ್ಲಿಸಿ ಎಂಬ ವಿನೂತನ ಕಾರ್ಯಕ್ರಮ ಉದ್ದೇಶಿಸಿ ಮತದಾರರ ಹಕ್ಕುಗಳಿಗಾಗಿ ಸಹಿ ಸಂಗ್ರಹಣೆ ಮಾಡಲಾಯಿತು

ಈ ಸಂದರ್ಭದಲ್ಲಿ ನಾಗಠಾಣ ಮತಕ್ಷೇತ್ರದ ಮಾಜಿ ಶಾಸಕ ರಾಜು ಆಲಗೂರ, ಡಿಸಿಸಿ ಉಪಾಧ್ಯಕ್ಷರಾದ ಗಂಗಾಧರ ಸಂಬಣ್ಣಿ, ಸುಭಾಷ ಕಾಲೇಭಾಗ, ಜಿಲ್ಲಾ ಕಾಂಗ್ರೆಸ್ ಮೀನುಗಾರರ ಸಮಿತಿ ಅಧ್ಯಕ್ಷ ಕೃಷ್ಣ ಕಾಮಟೆ, ಸಾಹೇಬಗೌಡ ಬಿರಾದಾರ,

ರಮೇಶ ಗುಬ್ಬೇವಾಡ, ಯಾಕುಬ್ ನಾಟೀಕಾರ, ಮೀನುಗಾರರ ಕಾಂಗ್ರೆಸ್ ಚಡಚಣ ನಗರ ಘಟಕ ಅಧ್ಯಕ್ಷ ಪರಮಾನಂದ ಕೋಳಿ, ಡಿಸಿಸಿ ಪ್ರಧಾನ ಕಾರ್ಯದರ್ಶಿ ವಸಂತ ಹೊನಮೊಡೆ ಹಾಗೂ ಜಿಲ್ಲಾ, ತಾಲೂಕು, ಬ್ಲಾಕ್ ಮಟ್ಟದ ಪದಾಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.

# ಗಾಯಾಳುಗಳ ಆರೋಗ್ಯ ವಿಚಾರಿಸಿದ ಗಜಾನನ ಮಂಗಸೂಳಿ

**ಅಥಣಿ :** ತಾಲೂಕಿನ ಸತ್ತಿ ಗ್ರಾಮದಿಂದ ಅಡಹಳ್ಳಟ್ಟಿ ಗ್ರಾಮಕ್ಕೆ ಸುಮಾರು 32 ಜನ ಕೂಲಿ ಕಾರ್ಮಿಕರನ್ನು ಸಾಗಿಸುತ್ತಿದ್ದ ಗೂಡ್ಸ್ ವಾಹನವು ರಸ್ತೆ ಮಾರ್ಗ ಮಧ್ಯೆ ಟೈರ್ ಬಷ್ಟ್ ಆಗಿ ವಾಹನ ಪಲ್ಟಿಯಾಗಿದ್ದರಿಂದ ಕೂಲಿ ಕಾರ್ಮಿಕರು ಗಾಯಗೊಂಡು ಅಥಣಿ ಸರ್ಕಾರಿ ಆಸ್ಪತ್ರೆ ಹಾಗೂ ವಿವಿಧಖಾಸಗಿಆಸ್ಪತ್ರೆಗಳಲ್ಲಿಚಿಕಿತ್ಸೆಪಡೆಯುತ್ತಿದ್ದು, ಅಥಣಿ ಕಾಂಗ್ರೆಸ್ ಮುಖಂಡ. ಸಮಾಜ ಸೇವಕ ಹಾಗೂ ರೋಟರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಗಜಾನನ ಮಂಗಸೂಳಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಗಾಯಾಳುಗಳನ್ನು ಭೇಟಿ ಮಾಡಿ ಅವರ ಆರೋಗ್ಯದ ಕುರಿತು ವಿಚಾರಿಸಿ ಧೈರ್ಯ ತುಂಬಿದರು. ಸ್ಥಳದಲ್ಲಿದ್ದ ವೈದ್ಯರು ಹಾಗೂ ಸಿಬ್ಬಂದಿಯೊಂದಿಗೆ ಗಾಯಾಳುಗಳ ಸ್ಥಿತಿಗತಿ ಬಗ್ಗೆ ವಿಚಾರಿಸಿ ಮಾಹಿತಿ ಪಡೆದರು. ಎಲ್ಲರೂ ಶೀಘ್ರ ಗುಣಮುಖರಾಗುವ ನಿಟ್ಟಿನಲ್ಲಿ ಸೂಕ್ತ ವೈದ್ಯಕೀಯ ಸೇವೆ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದಾರ್ಥ ಸಿಂಗೆ, ಉಮರ ಸೈಯ್ಯದ್, ಪ್ರಶಾಂತ ಇಜಾರೆ ಮತ್ತಿತರರು ಉಪಸ್ಥಿತರಿದ್ದರು.



# ಅಧಿಕಾರಿ, ಗುತ್ತಿಗೆದಾರರ ಮೇಲೆ ‘ಲೋಕಾ’ದಾಳಿ

**ಕೊಪ್ಪಳ :** ಆದಾಯಕ್ಕಿಂತಲೂ ಹೆಚ್ಚು ಆಸ್ತಿ ಗಳಿಸಿದ ಮತ್ತು ಹಲವು ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರದ ಆರೋಪ ಕೇಳಿಬಂದಿದ್ದರಿಂದ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಇಲ್ಲಿನ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಸಹೋದರ ಶಕೀಲ್ ಪಟೇಲ್ ಹಾಗೂ ಅಧಿಕಾರಿಗಳಮನೆಮೇಲೆದಾಳಿನಡೆಸಿದ್ದಾರೆ. ಕಳೆದ ವರ್ಷ ನೂರಾರು ಕಾಮಗಾರಿಗಳಲ್ಲಿ ಕೋಟ್ಯಂತರ ರೂಪಾಯಿ ಮೊತ್ತದ ಭ್ರಷ್ಟಾಚಾರ ಆಗಿದೆ ಎನ್ನುವ ಆರೋಪದ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಲೋಕಾಯುಕ್ತಕ್ಕೂ ಕೆಲವರುದೂರುಸಲ್ಲಿಸಿದ್ದರು.ಮಂಗಳವಾರ ಬೆಳಿಗ್ಗೆಯಿಂದಲೇ ಲೋಕಾಯುಕ್ತ ಅಧಿಕಾರಿಗಳ ಒಂದು ತಂಡ ನಗರಸಭೆ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ.ನಗರಸಭೆಯಲ್ಲಿಯೂ ದಾಖಲೆ ಪರಿಶೀಲಿಸಿದರು.

ಇನ್ನುಳಿದ ತಂಡಗಳು ನಗರಸಭೆಯ ಜೆ.ಇ. ಸೋಮಲಿಂಗಪ್ಪ ಮನೆಯಿರುವ ಇಲ್ಲಿನ ಶಿವಗಂಗಾ ನಗರ, ಆರ್.ಐ. ಉಜ್ವಲ್ ಹಾಗೂ ಗುತ್ತಿಗೆದಾರ ಪ್ರವೀಣ್ ಚಂದಾರಿ ಸೇರಿದಂತೆ ವಿವಿಧೆಡೆ ತಪಾಸಣೆ ನಡೆಸಿದವು. ಸೋಮಲಿಂಗಪ್ಪ ಮನೆಯಲ್ಲಿ ಮಧ್ಯಾಹ್ನ ದಾಖಲೆಗಳ ಪರಿಶೀಲನೆ
ಪೂರ್ಣಗೊಂಡಿತು.



ಬೆಳಿಗಿನ ಜಾವವೇ ಅಧಿಕಾರಿಗಳು ನಗರಸಭೆ ಕಚೇರಿ ಮತ್ತು ಮನೆಗಳಿಗೆ ತೆರಳಿದರು. ಇದ್ದಲ್ಲಿಯೇ ಉಪಾಹಾರ, ಊಟ ತರಿಸಿಕೊಂಡು ದಾಖಲೆಗಳನ್ನು ಪರಿಶೀಲಿಸಿದರು.

ದಾಳಿ ಮಾಡಿದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮನೆಯಲ್ಲಿ ಹಲವು ದಾಖಲೆಗಳು ಲಭ್ಯವಾಗಿದ್ದು, ಅವುಗಳ ಪರಿಶೀಲನೆ ನಡೆಯುತ್ತಿದೆ. ಕಚೇರಿಯಲ್ಲಿಯೇ ಅಪಾರ ಪ್ರಮಾಣದ ದಾಖಲೆಗಳುಇದ್ದು,ಅವುಗಳನ್ನುಪರಿಶೀಲನೆ ಮಾಡಲಾಗುತ್ತಿದೆ. ಬುಧವಾರವೂ ತಪಾಸಣೆ ಮುಂದುವರಿಯಲಿದೆ’ ಎಂದು ಲೋಕಾಯುಕ್ತ ಅಧಿಕಾರಿಯೊಬ್ಬರು ತಿಳಿಸಿದರು. ಆದಾಯಕ್ಕಿಂತಲೂ ಹೆಚ್ಚು ಆಸ್ತಿ ಗಳಿಸಿದ ಮತ್ತು ಹಲವು ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರದ ಆರೋಪ ಕೇಳಿಬಂದಿದ್ದರಿಂದ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಇಲ್ಲಿನ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಸಹೋದರ ಶಕೀಲ್ ಪಟೇಲ್ ಹಾಗೂ ಅಧಿಕಾರಿಗಳ ಮನೆ ಮೇಲೆ ದಾಳಿ ನಡೆಸಿದ್ದಾರೆ.

ಕಳೆದ ವರ್ಷ ನೂರಾರು ಕಾಮಗಾರಿಗಳಲ್ಲಿ ಕೋಟ್ಯಂತರ ರೂಪಾಯಿ ಮೊತ್ತದ ಭ್ರಷ್ಟಾಚಾರ ಆಗಿದೆ ಎನ್ನುವ ಆರೋಪದ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಲೋಕಾಯುಕ್ತಕ್ಕೂ ಕೆಲವರುದೂರುಸಲ್ಲಿಸಿದ್ದರು.ಮಂಗಳವಾರ ಬೆಳಿಗ್ಗೆಯಿಂದಲೇ ಲೋಕಾಯುಕ್ತ ಅಧಿಕಾರಿಗಳ ಒಂದು ತಂಡ ನಗರಸಭೆ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ.ನಗರಸಭೆಯಲ್ಲಿಯೂ ದಾಖಲೆ ಪರಿಶೀಲಿಸಿದರು.

ಇನ್ನುಳಿದ ತಂಡಗಳು ನಗರಸಭೆಯ ಜೆ.ಇ. ಸೋಮಲಿಂಗಪ್ಪ ಮನೆಯಿರುವ ಇಲ್ಲಿನ ಶಿವಗಂಗಾ ನಗರ, ಆರ್.ಐ. ಉಜ್ವಲ್ ಹಾಗೂ ಗುತ್ತಿಗೆದಾರ ಪ್ರವೀಣ್ ಚಂದಾರಿ ಸೇರಿದಂತೆ ವಿವಿಧೆಡೆ ತಪಾಸಣೆ ನಡೆಸಿದವು. ಸೋಮಲಿಂಗಪ್ಪ ಮನೆಯಲ್ಲಿ ಮಧ್ಯಾಹ್ನ ದಾಖಲೆಗಳ ಪರಿಶೀಲನೆ
ಪೂರ್ಣಗೊಂಡಿತು.

ಬೆಳಿಗಿನ ಜಾವವೇ ಅಧಿಕಾರಿಗಳು ನಗರಸಭೆ ಕಚೇರಿ ಮತ್ತು ಮನೆಗಳಿಗೆ ತೆರಳಿದರು. ಇದ್ದಲ್ಲಿಯೇ ಉಪಾಹಾರ, ಊಟ ತರಿಸಿಕೊಂಡು ದಾಖಲೆಗಳನ್ನು ಪರಿಶೀಲಿಸಿದರು.

ದಾಳಿ ಮಾಡಿದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮನೆಯಲ್ಲಿ ಹಲವು ದಾಖಲೆಗಳು ಲಭ್ಯವಾಗಿದ್ದು, ಅವುಗಳ ಪರಿಶೀಲನೆ ನಡೆಯುತ್ತಿದೆ. ಕಚೇರಿಯಲ್ಲಿಯೇ ಅಪಾರ ಪ್ರಮಾಣದ ದಾಖಲೆಗಳುಇದ್ದು,ಅವುಗಳನ್ನುಪರಿಶೀಲನೆ ಮಾಡಲಾಗುತ್ತಿದೆ. ಬುಧವಾರವೂ ತಪಾಸಣೆ ಮುಂದುವರಿಯಲಿದೆ’ ಎಂದು ಲೋಕಾಯುಕ್ತ ಅಧಿಕಾರಿಯೊಬ್ಬರು ತಿಳಿಸಿದರು.

# ಸರ್ಕಾರಕ್ಕೆ ಹಿಂದೂಗಳ ಕಾಳಜಿಯಿಲ್ಲ: ಯತ್ನಾಳ



**ಗಂಗಾವತಿ :** ’ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇನೆ ಎನ್ನುತ್ತಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಸರ್ಕಾರವನ್ನು ಟಿಪ್ಪುಸುಲ್ತಾನ್, ಔರಂಗಜೇಬನ ಸರ್ಕಾರವಾಗಿ ಮಾಡಿದ್ದಾರೆ.

ಸರ್ಕಾರಕ್ಕೆ ಹಿಂದೂಗಳ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ. ಮುಖ್ಯಮಂತ್ರಿ ಕಚೇರಿಯಲ್ಲಿ ಮುಸ್ಲಿಮರ ಆಡಳಿತ ನಡೆಯುತ್ತಿದೆ’ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಆರೋಪಿಸಿದರು. ನಗರದ ಬಾಬು ಜಗಜೀವನರಾಂ ವೃತ್ತದಲ್ಲಿ ಮಂಗಳವಾರ ವಿಜಯವೃಂದ ಯುವಕ ಸಂಘದ ಗಣೇಶ ಮೂರ್ತಿ ವಿಸರ್ಜನೆಯ ಶೋಭಾಯಾತ್ರೆ ಸಭೆಯಲ್ಲಿ ಮಾತನಾಡಿದ ಅವರು ‘ಮುಖ್ಯಮಂತ್ರಿಗೆ ಮುಸ್ಲಿಮರ ಬಗ್ಗೆ ಮಾತ್ರ ಚಿಂತೆ, ಮಾಸಿಕ ಆರು ಸಾವಿರ, ವಿದೇಶಿ ಶಿಕ್ಷಣಕ್ಕೆ 30 ಲಕ್ಷ, 100 ಉರ್ದು ಶಾಲೆಗಳು, ಬೆಂಗಳೂರಿನಲ್ಲಿ ಹಜ್ ಭವನ, ಕ್ರೈಸ್ತರ ಅಭಿವೃದ್ಧಿಗೆ ?250 ಕೋಟಿ ಹೀಗೆ ಹಿಂದೂಗಳಿಗೂ ಏನೂ ಇಲ್ಲದಂತೆ ಮಾಡುತ್ತಿದ್ದಾರೆ’ ಎಂದು ದೂರಿದರು.

ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಂಸದ ಶಿವರಾಮಗೌಡ, ಸಿಂಗನಾಳ ವಿರೂಪಾಕ್ಷಪ್ಪ ಸೇರಿದಂತೆ ಅನೇಕರು ಇದ್ದರು.

ಯತ್ನಾಳ ಭಾಷಣ ಕೇಳಲು ಅಪಾರ ಸಂಖ್ಯೆಯಲ್ಲಿ ಯುವಜನತೆ ನೆರೆದಿದ್ದರು.

# ಒಂದೆಡೆ ದಾಖಲಾಗದ ಚದುರಿದ ಚಿತ್ರಗಳು

**ಕೊಪ್ಪಳ :** ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೂ ಆಗಿನ ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಜನರ ಮೇಲೆ ನಿಜಾಮರ ಕಪಿಮುಷ್ಠಿಯಿತ್ತು. ಅದರಿಂದ ಹೊರಬಂದು 78 ವರ್ಷಗಳಾದರೂ ವಿಮೋಚನಾ ಹೋರಾಟದ ಘಟನಾವಳಿಗಳ ಚದುರಿದ ಚಿತ್ರಗಳನ್ನು ಒಂದೆಡೆ ದಾಖಲಿಸುವ ಕೆಲಸ ಈ ಭಾಗದಲ್ಲಿ ಆಗಿಲ್ಲ.

ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ವಿಮೋಚನಾ ಹೋರಾಟದ ಅನೇಕ ಹೆಜ್ಜೆಗುರುತುಗಳು ಇವೆ. ರಜಾಕಾರರ ವಿರುದ್ಧದ ಹೋರಾಟದಲ್ಲಿ ಅನೇಕ ಗುಪ್ತ ಸಭೆಗಳು, ಶಿಬಿರಗಳು ನಡೆದಿವೆ. ಕೊಪ್ಪಳದ ಶಾಸಕರ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ವಿಮೋಚನಾ ಹೋರಾಟಕ್ಕೆ



ಸಾಕ್ಷಿಯಾಗಿತ್ತು. ಕಟ್ಟಡ ಆಗಿನ ಮುನ್ಸಿಪಲ್ ಮ್ಯಾಜಿಸ್ಟ್ರೇಟರ್ ಬಂಗಲೆಯಾಗಿತ್ತು. ಅವರ ವಿರುದ್ಧದ ಹೋರಾಟಗಳು, ಒಕ್ಕೂಟ ಚಳವಳಿ, ಮಾಧ್ಯಮಗಳು ವಹಿಸಿದ ಪಾತ್ರ ಅಪಾರ ಪ್ರಮಾಣದಲ್ಲಿದೆ.

ಕೊಪ್ಪಳದಲ್ಲಿ ಹಳೆ ಬ್ರಹ್ಮನವಾಡಿ ಶಾಲೆ, ಗಿಣಿಗೇರಿ ಹೈಸ್ಕೂಲು, ಬೀಳಿಸಲಾಗಿರುವ ಕಮಾನುಗಳು, ಗಂಗಾವತಿಯಲ್ಲಿ ಹಳೆ ನ್ಯಾಯಾಲಯ ಕಟ್ಟಡ, ಹಳೇತಹಶೀಲ್ದಾರ್ ಕಚೇರಿ, ಅಂಚೆ ಕಚೇರಿ, ಐ.ಬಿ., ನಿಜಾಮರ ವಿರುದ್ಧದ ಹೋರಾಟದಲ್ಲಿ ಪ್ರಾಣ ತೆತ್ತ ರೈತ ಮುಖಂಡ ಮಾಕಣ್ಣ ಕಂಬಳಿ ಹೀಗೆ ಅನೇಕ ಹೋರಾಟದ ಕಥನಗಳನ್ನು ಜನರ ಮುಂದಿಡುವ ಘಟನಾವಳಿಗಳು ನಡೆದಿವೆ. ಅವುಗಳ ಮಾಹಿತಿಯನ್ನು ಒಂದೆಡೆ ಸೇರಿಸಿ ವಸ್ತು ಸಂಗ್ರಹಾಲಯ ನಿರ್ಮಿಸಿ ಜನರ ಮುಂದಿಡುವ ಕೆಲಸ ಆಗಬೇಕಾಗಿದೆ ಎನ್ನುತ್ತಾರೆ ಇತಿಹಾಸ ಸಂಶೋಧಕರು.

ಕೊಪ್ಪಳದಲ್ಲಿ ಕೆಲವು ವರ್ಷಗಳ ಹಿಂದೆ ಹೋರಾಟದ ಕುರಿತು ಛಾಯಾಚಿತ್ರಗಳ ಪ್ರದರ್ಶನ ನಡೆದಿತ್ತು. ಈಗ ವಿಮೋಚನಾ ಹೋರಾಟದ ಮಾಹಿತಿಗಳನ್ನು ಒಳಗೊಂಡ ದಾಖಲೆಗಳು, ಸಾಹಿತ್ಯಿಕ ಹೋರಾಟದ ಪುಸ್ತಕಗಳು, ಛಾಯಾಚಿತ್ರಗಳ ಸಂಗ್ರಹ, ಮಾಹಿತಿ ಸಮೇತ ಛಾಯಾಚಿತ್ರಗಳ ವಿವರ, ಹೋರಾಟಗಾರರ ಪರಿಚಯ, ಹೋರಾಟ ಶಿಬಿರದ ಕೇಂದ್ರಗಳು ಹೀಗೆ ಅನೇಕ ಮಾಹಿತಿಗಳನ್ನು ಒಂದೇ ಸೂರಿನಲ್ಲಿ ತಿಳಿಸುವ ಕೆಲಸವಾಗಬೇಕಾಗಿದೆ.

ಪ್ರತಿ ವರ್ಷ ಕಲ್ಯಾಣ ಕರ್ನಾಟಕ ಮಹೋತ್ಸವ ಆಚರಿಸಿ ವಿಮೋಚನಾ ವಿರುದ್ಧದ ಹೋರಾಟ ಸ್ಮರಿಸಿ ಸುಮ್ಮನಾಗುತ್ತೇವೆ. ಅವುಗಳನ್ನು ಮುಂದಿನ ಪೀಳಿಗೆಗೂ ತಿಳಿಸಲು ಒಂದೆಡೆ ದಾಖಲೀಕರಣವಾಗುವ ಅಗತ್ಯವಿದೆ.

ಕೊಪ್ಪಳದಲ್ಲಿ ಕಮಾನುಗಳನ್ನು ಉಳಿಸಿಕೊಳ್ಳಲು ಮಹಾಂತೇಶ ಕೊತಬಾಳ ಸಾಕಷ್ಟು ಹೋರಾಟ ಮಾಡಿದ್ದಾರೆ. ಅವುಗಳನ್ನು ಪುನರ್ ನಿರ್ಮಾಣ ಮಾಡಬೇಕುಎಂದುಸರ್ಕಾರಆದೇಶವನ್ನೂ ಮಾಡಿದೆ. ಆದರೆ ಕಾರ್ಯರೂಪಕ್ಕೆ ಬಂದಿಲ್ಲ. ವಿಮೋಚನಾ ಹೋರಾಟದ ಹೆಜ್ಜೆಗುರುತುಗಳ ಬಗ್ಗೆ ಹೈದರಾಬಾದ್‌ನಲ್ಲಿ ನಿರ್ಮಿಸಿದಂತೆಯೇ ನಮ್ಮ ಭಾಗದಲ್ಲಿಯೂ ವಸ್ತು ಸಂಗ್ರಹಾಲಯ ನಿರ್ಮಿಸಬೇಕು’ ಎಂದು ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಒತ್ತಾಯಿಸಿದರು.

# ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸುವ ಅಗತ್ಯವಿಲ್ಲ: ರಾಯರಡ್ಡಿ

**ಕೊಪ್ಪಳ:** ‘ಹಿಂದುಳಿದವರ್ಗಗಳಶಾಶ್ವತ ಆಯೋಗ ಸಂವಿಧಾನಾತ್ಮಕವಾಗಿ ಸ್ವತಂತ್ರ ಸಂಸ್ಥೆಯಾಗಿದ್ದು, ಸಮೀಕ್ಷೆಯಲ್ಲಿ ಪಟ್ಟಿಯಲ್ಲಿ ಹಿಂದೂ ಜಾತಿಗಳ ಮುಂದೆ ಕ್ರಿಶ್ಚಿಯನ್ ಎನ್ನುವುದನ್ನು ಯಾಕೆ ಸೇರಿಸಲಾಗಿದೆ ಎನ್ನುವ ವಿಚಾರವನ್ನು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ. ನಮಗೆ ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸುವ ಅಗತ್ಯವಿಲ್ಲ’ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಯಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.



ನಗರದಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಆಯೋಗ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಆಕ್ಷೇಪಗಳಿದ್ದರೆ ಸಲ್ಲಿಸಲು ಅವಕಾಶವಿದೆ. ಬಿಜೆಪಿ ಜಾತಿ, ಧರ್ಮಗಳ ನಡುವೆ ಗೊಂದಲ ಎಬ್ಬಿಸುವ ಕೆಲಸ ಮಾಡುತ್ತಿದೆ. ಆ ಪಕ್ಷದವರು ಇದೇ ರೀತಿ ಮಾಡುತ್ತ ಹೋದರೆ ಎಂದಿಗೂ ಅಧಿಕಾರಕ್ಕೆ ಬರುವುದಿಲ್ಲ’ ಎಂದರು.

ನನಗೆ ಯಾವುದೇ ಧರ್ಮ ಇಲ್ಲ. ಇದು ನನ್ನ ವೈಯಕ್ತಿಕ ಹೇಳಿಕೆ. ಸಮೀಕ್ಷೆ ವೇಳೆ ಏನೆಂದು ಬರೆಯಿಸಬೇಕು ಎನ್ನುವ ವಿಚಾರವನ್ನು ಈಗಾಗಲೇ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪ್ರಮುಖರು ಹೇಳಿದ್ದಾರೆ. ಲಿಂಗಾಯತ ಎನ್ನುವುದು ಧರ್ಮ ಹಾಗೂ ಜಾತಿ ಅಲ್ಲ.

ಅದು ತತ್ವ ಆಧಾರಿತ ಚಳವಳಿ, ಹಿಂದೂ ಕೂಡ ಸಂಸ್ಕೃತಿಯೇ. ಸಮೀಕ್ಷೆಯಲ್ಲಿ ಎಸ್.ಸಿ. ಎಂದು ಬರೆಯಿಸಿದರೆ ಅದರ ಪ್ರಮಾಣ ಪತ್ರ ಸಿಗುವುದಿಲ್ಲ. ಈ ಸಮೀಕ್ಷೆ ಜನರ ಸ್ಥಿತಿಗತಿ ಬಗ್ಗೆ ಮಾಹಿತಿ ಸಂಗ್ರಹಕ್ಕೆ ಮಾತ್ರ’ ಎಂದು ಹೇಳಿದರು.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State